
ಕಲ್ಯಾಣ ಕಿರಣ

ಜನವರಿ - 2003

ಬೆಲೆ ರೂ. 5-0





ಬೆಂಗಳೂರಿನ ಟಿ. ದಾಸರಹಳ್ಳಿಯಲ್ಲಿ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿಯವರ ಪ್ರವಚನ ಸಂದರ್ಭದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಭವ್ಯ ಸ್ವಾಗತಕೋರಿ ಮೆರವಣಿಗೆ ಮೂಲಕ ವೇದಿಕೆಗೆ ಬರಮಾಡಿಕೊಳ್ಳುತ್ತಿರುವ ದೃಶ್ಯ



ಪೂಜ್ಯ ಮಾತಾಜಿಯವರಿಗೆ ಪುಷ್ಪ ವೃಷ್ಟಿ ಮಾಡುತ್ತಿರುವ ಶರಣ ಶರಣೆಯರು

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಸಂಪುಟ 32 ಬಸವ ಶಕೆ 869 ಆಜೀವ ಸದಸ್ಯತ್ವ 500 ರೂ

ಸಂಚಿಕೆ - 1 ಜನವರಿ 2003 ವಾರ್ಷಿಕ ಚಂದಾ 50/- ರೂ

❋ ಬಸವ ಧರ್ಮದ ಕಿರಣವಾಗಲು ಬಾ ❋

ಬಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯು ದಿವ್ಯ ಸ್ಫೂರ್ತಿಯ ಚಿಲುಮೆ ॥ ಪ ॥

ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾನವ ಗೈದು ಹರಿಯುತಿಹಳೀ ಕೃಷ್ಣೆ
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿ ಹಿಡಿದು ॥ 1 ॥

ಅಂಗವೆನೆ ಜೀವಾತ್ಮ ಲಿಂಗವೆನೆ ಪರಮಾತ್ಮ
ಲಿಂಗಾಂಗ ಸಮರಸವೆ ಜೀವನದ ಗುರಿಯು
ಬಸವ ಗೀತೆಯ ಸಾರ ಇದುವೆ ಆಗಿಹುದು
ಲಿಂಗದೇವನ ಎಡೆಗೆ ಕರೆದೊಯ್ಯುತಿಹುದು ॥ 2 ॥

ಕಲ್ಯಾಣ ಪ್ರಣತೆಯಲಿ ಭಕ್ತಿ ತೈಲವ ಉಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲಿ ತ್ಯಾಗ ತೈಲವನೆರೆದು
ಬಸವ ಜ್ಯೋತೀಯ ಬೆಳಕ ಜಗಕ್ಕೆಲ್ಲ ಪಸರಿಸುವಾ ॥ 3 ॥

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥ 4 ॥

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

1. ದಕ್ಷಿಣದ ಕೃಷ್ಣೆಗೆ ಕರೆವರೈಯ್ಯ ಜನ ನೆರೆವರಯ್ಯ
2. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
   ಜರಿಯಲು ಬೇಡ । ಅರಿದು ನೋಡುವುದು
3. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
   ಒಬ್ಬರುಳಿಯದ ಹಾಗೆ ನೆರೆದು ಕೂಡುವರು
   ಧರೆಯ ಭಕ್ತರಿಗಿನ್ನು ಅರಿಕೆ ಮಾಡುತಲಿ
   ಬರೆದಿಟ್ಟ ಪತ್ರಗಳು ಜರಿಯಲು ಬೇಡ

- ಮಡಿವಾಳ ಮಾಚಿದೇವರ ಕಾಲಜ್ಞಾನ

★ ಕಲ್ಯಾಣ ಕಿರಣ ★

ಸಂಪುಟ 32	ಬಸವ ಶಕೆ 869	ಆಜೀವ ಸದಸ್ಯತ್ವ 500 ರೂ
ಸಂಚಿಕೆ - 1	ಜನವರಿ 2003	ವಾರ್ಷಿಕ ಚಂದಾ 50 ರೂ



16 ನೆಯ ಶರಣ ಮೇಳದ ನಿಮಿತ್ತ 'ಕಲ್ಯಾಣ ಕಿರಣ'ದ ಓದುಗರಿಗೆಲ್ಲ ಹಾರ್ದಿಕ ಶುಭಾಷಯಗಳು.

"ಶರಣ ಮೇಳದಲ್ಲಿ ಭಾಗವಹಿಸುವುದು ಪ್ರತಿಯೊಬ್ಬ ಲಿಂಗಾಯತನ ಆದ್ಯ ಕರ್ತವ್ಯ"

\- ವ್ಯವಸ್ಥಾಪಕರು

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ: ಬಸವ ಮಂಟಪ, 2035
ದೂರವಾಣಿ: 3325335/ 3322790
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ಪ್ರಭುದೇವ.ಚ.ಕಪ್ಪರದ




ಧರ್ಮಗುರು ಬಸವಣ್ಣ

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹದಿನಾರನೆಯ

ಶರಣ ಮೇಳ



ಗಣ ಧ್ವಜ

2003 ಜನವರಿ
11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಆವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15, ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿ ವರ್ಷವೂ ಬಸವಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನಾರನೆಯ ಶರಣ ಮೇಳವು 2003 ಇಸ್ವಿಯ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ, ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ ೬ ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40 ದಿವಸ, 30 ದಿವಸ, 20 ದಿವಸ, 10 ದಿವಸಗಳ 'ಶರಣ ವ್ರತ'- ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಶರಣ ಮೇಳಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಬನ್ನಿರಿ.

★ ಶರಣಾರ ಬರುವೆಮಗೆ ಪ್ರಾಣ ಜೀವಾಳ ★

ಬೆಂಗಳೂರು ವಿಳಾಸ :	ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಮಂಟಪ, 2035	ಕಾರ್ಯಾಧ್ಯಕ್ಷೆ , ಶರಣ ಮೇಳ ಉತ್ಸವ ಸಮಿತಿ
2ನೇ ಬ್ಲಾಕ್, ಕಾರ್ಡ್ ರಸ್ತೆ	ಕೂಡಲ ಸಂಗಮ- 587115
ರಾಜಾಜಿನಗರ, ಬೆಂಗಳೂರು-560010	ತಾ-ಹುನಗುಂದ, ಜಿಲ್ಲೆ-ಬಾಗಲಕೋಟ
ದೂರವಾಣಿ: 080-3325335/ 3322790	ದೂರವಾಣಿ : 0835-768038/ 768007

ಶರಣ ಮೇಳ - 2003, ಕಾರ್ಯಕ್ರಮದ ಸಂಕ್ಷಿಪ್ತ ಪಟ್ಟಿ

ಪ್ರಭು(ಗುರು)ವಾರ, ದಿ. 9-1-2003 ರಂದು, ಬೆಳಿಗ್ಗೆ 8-00 ಗಂಟೆಗೆ ವಚನ ಪಠಣ ಪ್ರಾರಂಭ

ಶರಣ (ಶನಿ)ವಾರ, ದಿ. 11-1-2003

1. ಚಿಂತನಗೋಷ್ಠಿ- 1 ಉದ್ಘಾಟನೆ ಬೆಳಿಗ್ಗೆ 10-30
2. ರಸಪ್ರಶ್ನೆ- 2 ಮಧ್ಯಾಹ್ನ 3-30
3. ಚಿಂತನಗೋಷ್ಠಿ- 2, ಸಂಜೆ 6-30

ದೇವ (ಭಾನು)ವಾರ, ದಿ. 12-1-2003

4. ಶರಣ ಮೇಳ ಉದ್ಘಾಟನೆ ಬೆಳಿಗ್ಗೆ 10-30
   ಸಾಮೂಹಿಕ ಪ್ರಾರ್ಥನೆ - ಶರಣ ಸಂಗಮ, ಅತಿಥಿಗಳಿಂದ ಉಪನ್ಯಾಸ
5. ಚಿಂತನಗೋಷ್ಠಿ- 3, ಮಧ್ಯಾಹ್ನ 3-30 ರಿಂದ 5-30
6. ಧಾರ್ಮಿಕ ಗಣಗೋಷ್ಠಿ ಸಂಜೆ 6-30 ರಿಂದ

ಶಿವ (ಸೋಮ)ವಾರ, ದಿ. 13-1-2003

7. ಬಸವ ಧರ್ಮ ಪೀಠಾರೋಹಣ ಬೆಳಿಗ್ಗೆ 10-30
8. ಸಾಮೂಹಿಕ ಇಷ್ಟಲಿಂಗಾರ್ಚನೆ ಸಂಜೆ 6-00
9. ಗಣಗೋಷ್ಠಿ

ಬಸವ ಧರ್ಮ ಸಂಸ್ಥಾಪನಾ ದಿನಾಚರಣೆ ಬಸವ (ಮಂಗಳ)ವಾರ, ದಿ. 14-1-2003

10. ಧ್ವಜಾರೋಹಣ - ಗುರುವಂದನೆ ಬೆಳಿಗ್ಗೆ 10-00
11. ಗಣಲಿಂಗ ಪೂಜೆ - ದರ್ಶನ ಬೆಳಿಗ್ಗೆ 10-30
12. ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣ ಬೆಳಿಗ್ಗೆ 11-00
13. ಪಥ ಸಂಚಲನೆ - ಮೆರಮಣಿಗೆ ಸಂಜೆ 6-30
14. ಗಣಗೋಷ್ಠಿ

ಚನ್ನ (ಬುಧ)ವಾರ, ದಿ. 15-1-2003

15. ಸಿದ್ಧರಾಮೇಶ್ವರ ಜಯಂತಿ ಆಚರಣೆ- ಬೆಳಿಗ್ಗೆ 10-30
16. ಸಿದ್ಧರಾಮೇಶ್ವರರನ್ನು ಕುರಿತು ಪೂಜ್ಯ ಮಾತಾಜಿಯವರಿಂದ ಉಪನ್ಯಾಸ
17. ರಾಷ್ಟ್ರೀಯ ಬಸವ ದಳಗಳ ಅಧಿವೇಶನ
18. ಸಮಾರೋಪ ಸಮಾರಂಭ - ಶರಣ ಸಂದೇಶ ದಿ. 15-1-2003 ಸಂಜೆ 6-00
    ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು
    ಪೂಜ್ಯ ಶ್ರೀ ಮಾತೆ ಮಂಗಳಾದೇವಿ, ಪೂಜ್ಯ ಶ್ರೀ ಸರ್ವಮಂಗಳಾದೇವಿ

ವಿಶೇಷ ಸೂಚನೆ :

1. ಪ್ರತಿ ನಿತ್ಯ ಸಾಮೂಹಿಕ ಇಷ್ಟಲಿಂಗಾರ್ಚನೆ : ವಿಶ್ವ ಚೇತನದ ಪ್ರತೀಕವಾದ ಇಷ್ಟಲಿಂಗ ಅರ್ಚನೆ, ತ್ರಾಟಕ ಯೋಗಗಳ ಅಭ್ಯಾಸವನ್ನು ಬೆಳಿಗ್ಗೆ 7-30 ರಿಂದ 9 ರವರೆಗೆ ದಿ. 12, 13, 14, ಮತ್ತು 15 ರಂದು ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳು ಮತ್ತಿತರ ಜಂಗಮ ಮೂರ್ತಿಗಳು ಮಾಡಿಸಲಿರುವರು.
2. ದಿ. 15-1-2003 ರಂದು ಬಸವ ಧರ್ಮ ಪೀಠಾಧ್ಯಕ್ಷರಿಂದ ಮಧ್ಯಾಹ್ನ 12-00 ರಿಂದ ವಿಶೇಷ ದರ್ಶನ ಮತ್ತು ಆಶೀರ್ವಾದ.

ಆದಿ ಶರಣರ ಸ್ತೋತ್ರ

ರಚನೆ : ಬಸವಾತ್ಮಜೆ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಜಯ ಜಯ ಘನಲಿಂಗ ಜಯ ಜಯ ಮಂಗಳಾಂಗ
ಜಯತು ಜಯ ಬಸವ ಗುರು ಪ್ರಾಣೇಶ ಲಿಂಗ
ಜಯ ಭಕ್ತವತ್ಸಲ ಇಷ್ಟಪ್ರದಾಯಕ
ಜಯ ಸಚ್ಚಿದಾನಂದ ಜಯ ಲಿಂಗದೇವ ॥

1. ಸೃಷ್ಟಿಕರ್ತ ಲಿಂಗದೇವನಿಗೆ ಶರಣು, ಶರಣು ಶರಣಾರ್ಥಿ
2. ಧರ್ಮಕರ್ತ ಗುರು ಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
3. ಶೂನ್ಯಪೀಠಾಧೀಶ ಅಲ್ಲಮ ಪ್ರಭುದೇವರಿಗೆ ಶರಣು, ಶರಣು ಶರಣಾರ್ಥಿ
4. ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
5. ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಶರಣು, ಶರಣು ಶರಣಾರ್ಥಿ
6. ವೀರ ವಿರಾಗಿಣಿ ಅಕ್ಕಮಹಾದೇವಿಗೆ ಶರಣು, ಶರಣು ಶರಣಾರ್ಥಿ
7. ವೀರ ಗಣಾಚಾರಿ ಮಡಿವಾಳ ಮಾಚಿದೇವರಿಗೆ ಶರಣು, ಶರಣು ಶರಣಾರ್ಥಿ
8. ಕ್ರಾಂತಿ ಗಂಗೋತ್ರಿ, ಅಕ್ಕನಾಗಲಾಂಬಿಕಾ ತಾಯಿಗೆ ಶರಣು, ಶರಣು ಶರಣಾರ್ಥಿ
9. ದಾಸೋಹಮೂರ್ತಿ ನೀಲಾಂಬಿಕಾತಾಯಿಗೆ ಶರಣು, ಶರಣು ಶರಣಾರ್ಥಿ
10. ಹುತಾತ್ಮ ಚೇತನ ಹರಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
11. ಧೀರ ಶರಣೆ ಕಲ್ಯಾಣಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
12. ಧೀರ ಶರಣ ಮಧುವರಸರಿಗೆ ಶರಣು, ಶರಣು ಶರಣಾರ್ಥಿ
13. ಧೀರ ಶರಣ ಶೀಲವಂತಯ್ಯನಿಗೆ ಶರಣು, ಶರಣು ಶರಣಾರ್ಥಿ
14. ಧೀರ ಶರಣೆ ಲಾವಣ್ಯವತಿಗೆ ಶರಣು, ಶರಣು ಶರಣಾರ್ಥಿ
15. ಪರಮ ಪ್ರಸಾದಿ ಡೋಹರ ಕಕ್ಕಯ್ಯನವರಿಗೆ ಶರಣು, ಶರಣು ಶರಣಾರ್ಥಿ
16. ತತ್ತ್ವನಿಷ್ಠುರಿ ಅಂಬಿಗರ ಚೌಡಯ್ಯನವರಿಗೆ ಶರಣು, ಶರಣು ಶರಣಾರ್ಥಿ
17. ರಾಜಯೋಗಿ ಮೋಳಿಗೆ ಮಾರಯ್ಯನವರಿಗೆ ಶರಣು, ಶರಣು ಶರಣಾರ್ಥಿ
18. ಆದರ್ಶಸತಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
19. ಅಂಗಸೋಂಕಿನ ಲಿಂಗ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
20. ಅಣತಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
21. ಅಗ್ಘವಣಿಯ ಹಂಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
22. ಹಡಪದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
23. ನಿಜಲಿಂಗಯೋಗಿ ಅಜಗಣ್ಣ ತಂದೆಗಳಿಗೆ ಶರಣು, ಶರಣು ಶರಣಾರ್ಥಿ
24. ಅನಾಮಿಕ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
25. ಅಪ್ಪಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
26. ಅಮರ ಗುಂಡದ ಮಲ್ಲಿಕಾರ್ಜುನ ತಂದೆಗೆ ಶರಣು, ಶರಣು ಶರಣಾರ್ಥಿ

27. ಸ್ವಾಭಿಮಾನ ನಿಧಿ ಅಮುಗಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
28. ಅರಿವಿನ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
29. ಅವಸರದ ರೇಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
30. ಸೌರಾಷ್ಟ್ರದ ಆದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
31. ಆನಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
32. ಆಯ್ದಕ್ಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
33. ನಿಸ್ವಾರ್ಥಸತಿ ಆಯ್ದಕ್ಕಿ ಲಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
34. ಉಗ್ಘಡಿಸುವ ಗಬ್ಬಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
35. ಉಪ್ಪರಗುಡಿಯ ಸೋಮಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
36. ಮಹಾಜ್ಞಾನಿ ಉರಿಲಿಂಗದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
37. ಚಿನ್ಮಯ ಶರಣ ಉರಿಲಿಂಗಪೆದ್ದಿ ಗುರುವಿಗೆ ಶರಣು, ಶರಣು ಶರಣಾರ್ಥಿ
38. ಉಳಿಯುಮೇಶ್ವರ ಚಿಕ್ಕಣ್ಣನವರಿಗೆ ಶರಣು, ಶರಣು ಶರಣಾರ್ಥಿ
39. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
40. ಎಲೆಗಾರ ಕಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
41. ಏಕಾಂತದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
42. ಏಲೇಶ್ವರದ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
43. ಒಕ್ಕಲಿಗ ಮುದ್ದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
44. ಕಳಿಂಗದೇಶದ ಸುಜ್ಞಾನಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
45. ಲಮಾಣ ನಾಯಕ ನನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
46. ಗುಡ್ಡಾಪುರದ ದಾನಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
47. ವಚನಕಾರ್ತಿ ಅಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
48. ಜ್ಞಾನನಿಧಿ ವೀರಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
49. ಉದಾರ ಹೃದಯಿ ಚಂಗಳೆ ತಾಯಿಗೆ ಶರಣು, ಶರಣು ಶರಣಾರ್ಥಿ
50. ಲಿಂಗಪ್ರಾಣ ಕಮಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
51. ಭಕ್ತಿನಿಧಿ ಶರಣೆ ಸೋಮವ್ವೆಗೆ ಶರಣು, ಶರಣು ಶರಣಾರ್ಥಿ
52. ಸದಾಚಾರ ಸಂಪನ್ನೆ ಚೋಳೀಯಕ್ಕನಿಗೆ ಶರಣು, ಶರಣು ಶರಣಾರ್ಥಿ
53. ಜಂಗಮ ದಾಸೋಹಿ ನಿಂಬಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
54. ದಾಸಿಮಯ್ಯಗಳ ಸತಿ ದುಗ್ಗಳೆಗೆ ಶರಣು, ಶರಣು ಶರಣಾರ್ಥಿ
55. ಶರಣ ಪ್ರೇಮಿ ಸುಗ್ಗಲವ್ವ ತಾಯಿಗೆ ಶರಣು, ಶರಣು ಶರಣಾರ್ಥಿ
56. ಧೀರ ಶರಣೆ ಅಮುಗೆ ರಾಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
57. ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
58. ನಾಗಿಮಯ್ಯಗಳ ಪುಣ್ಯ ಸ್ತ್ರೀ ಮಸಣಮ್ಮನಿಗೆ ಶರಣು, ಶರಣು ಶರಣಾರ್ಥಿ
59. ಕದಿರೆಯ ಕಾಯಕದ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
60. ಕದಿರರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
61. ಕನ್ನಡಿ ಕಾಯಕದ ಶರಣೆ ರೇಮಮ್ಮನಿಗೆ ಶರಣು, ಶರಣು ಶರಣಾರ್ಥಿ
62. ಕಾಟಕೂಟಯ್ಯಗಳ ಪುಣ್ಯ ಸ್ತ್ರೀ ಶರಣೆ ರೇಚವ್ವೆಗೆ ಶರಣು, ಶರಣು ಶರಣಾರ್ಥಿ

63. ಕಾಲಕಣ್ಣಿಯ ಕಾಯಕದ ಶರಣೆ ತಾಯಮ್ಮನಿಗೆ ಶರಣು, ಶರಣು ಶರಣಾರ್ಥಿ
64. ಕೊಂಡೆ ಮಂಚಣ್ಣಗಳ ಪುಣ್ಯ ಸ್ತ್ರೀ ಲಕ್ಷ್ಮಮ್ಮನಿಗೆ ಶರಣು, ಶರಣು ಶರಣಾರ್ಥಿ
65. ಕೊಟ್ಟಣ ಕಾಯಕದ ಶರಣೆ ಸೋಮಮ್ಮನಿಗೆ ಶರಣು, ಶರಣು ಶರಣಾರ್ಥಿ
66. ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಶರಣೆಗೆ ಶರಣು, ಶರಣು ಶರಣಾರ್ಥಿ
67. ಗುಂಡಯ್ಯಗಳ ಪುಣ್ಯ ಸ್ತ್ರೀ ಕೇತಲದೇವಿಗೆ ಶರಣು, ಶರಣು ಶರಣಾರ್ಥಿ
68. ಡೋಹರ ಕಕ್ಕಯ್ಯನವರ ಪುಣ್ಯ ಸ್ತ್ರೀ ಭಿಷ್ಟಾದೇವಿಗೆ ಶರಣು, ಶರಣು ಶರಣಾರ್ಥಿ
69. ಶರಣೆ ಗೊಗ್ಗವ್ವೆಗೆ ಶರಣು, ಶರಣು ಶರಣಾರ್ಥಿ
70. ಬಸರಯ್ಯಗಳ ಪುಣ್ಯ ಸ್ತ್ರೀ ವೀರಮ್ಮಗೆ ಶರಣು, ಶರಣು ಶರಣಾರ್ಥಿ
71. ಬತ್ತಲೇಶ್ವರಯ್ಯಗಳ ಪುಣ್ಯ ಸ್ತ್ರೀ ಗುಡ್ಡವ್ವೆಗೆ ಶರಣು, ಶರಣು ಶರಣಾರ್ಥಿ
72. ಬಾಚಿಕಾಯಕದ ಬಸವಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
73. ನಿಜ ಮುಕ್ತಿ ಶರಣೆ ಮುಕ್ತಾಯಕ್ಕಗೆ ಶರಣು, ಶರಣು ಶರಣಾರ್ಥಿ
74. ರಾಯಸದ ಮಂಚಣ್ಣಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
75. ಕಾಶ್ಮೀರದ ರಾಜಪುತ್ರಿ ಬೊಂತಾದೇವಿಗೆ ಶರಣು, ಶರಣು ಶರಣಾರ್ಥಿ
76. ರೇವಣಸಿದ್ದಯ್ಯಗಳ ಪುಣ್ಯ ಸ್ತ್ರೀ ರೇಕಮ್ಮನಿಗೆ ಶರಣು, ಶರಣು ಶರಣಾರ್ಥಿ
77. ಧೀಮಂತ ಶರಣೆ ಸತ್ಯಕ್ಕನಿಗೆ ಶರಣು, ಶರಣು ಶರಣಾರ್ಥಿ
78. ಸಿದ್ಧಬುದ್ಧಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
79. ಸದಾಚಾರ ಪಥ ಹಿಡಿದ ಸೂಳೆ ಸಂಕವ್ವೆಗೆ ಶರಣು, ಶರಣು ಶರಣಾರ್ಥಿ
80. ಹಡಪದ ಅಪ್ಪಣ್ಣಗಳ ಪುಣ್ಯ ಸ್ತ್ರೀ ಲಿಂಗಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
81. ಮಾರಯ್ಯಗಳ ಪುಣ್ಯ ಸ್ತ್ರೀ ಗಂಗಮ್ಮನಿಗೆ ಶರಣು, ಶರಣು ಶರಣಾರ್ಥಿ
82. ಸತ್ಯಸದಾಚಾರದ ಪಥ ಹಿಡಿದ ಮಾಯಿದೇವಿಗೆ ಶರಣು, ಶರಣು ಶರಣಾರ್ಥಿ
83. ನಾಗಲಾಂಬಿಕಾ ಪತಿ ಶಿವದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
84. ಎಳೆವರೆಯದಲ್ಲೇ ಲಿಂಗದೊಡಗೂಡಿದ ಬಾಲ ಸಂಗಯ್ಯನಿಗೆ ಶರಣು, ಶರಣು ಶರಣಾರ್ಥಿ
85. ಕಂಬದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
86. ಕನ್ನಡಿ ಕಾಯಕದ ಅಮ್ಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
87. ಕನ್ನದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
88. ಕರುಳ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
89. ಕಲಕೇತ ಶರಣರಿಗೆ ಶರಣು, ಶರಣು ಶರಣಾರ್ಥಿ
90. ಕಾಮಾಟದ ಭೀಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
91. ಕಿನ್ನರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
92. ಕೀಲಾರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
93. ಕೇದಾರ ಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
94. ಕೂಗಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
95. ಕೊಟಾರದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
96. ಕೋಲ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
97. ಗಜೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
98. ಗಣದಾಸಿ ವೀರಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

99. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
100. ಗೋರಕ್ಷನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
101. ತೆಲಗು ಜೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
102. ಶಿವಲಿಂಗ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
103. ಬೊಕ್ಕಸದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
104. ಗಾಣದ ಕನ್ನಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
105. ಗಾವುದಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
106. ಗುಪ್ತ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
107. ಗುರುಪುರದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
108. ಗುರುಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
109. ಘಟ್ಟವಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
110. ಚಂದಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ
111. ಜೇಡರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
112. ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
113. ಢಕ್ಕೆಯ್ಯ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
114. ಗಣಪ್ರಸಾದಿ ಡೋಹರ ಕಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
115. ತಳವಾರ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
116. ತುರುಗಾಹಿ ರಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
117. ತೆಲುಗೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
118. ದಶಗಣ ಸಿಂಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
119. ಅಹಿಂಸಾವಾದಿ ದಸರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
120. ದಾಸೋಹದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
121. ನಗೆಯ ಮಾರಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
122. ನಿಜಗುಣ ಶಿವಯೋಗಿ ಶರಣರಿಗೆ ಶರಣು, ಶರಣು ಶರಣಾರ್ಥಿ
123. ನಿವೃತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
124. ನಿಜಾನುಭಾವಿ ನುಲಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
125. ರೇವಣ ಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
126. ಮಲ್ಲಿಕಾರ್ಜುನ ಪಂಡಿತಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
127. ಮರುಳುಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
128. ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
129. ಪ್ರಸಾದಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
130. ಪ್ರಸಾದಿ ಲೆಂಕ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
131. ಬಹುರೂಪಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
132. ಬಳ್ಳೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
133. ಬಾಚಿ ಕಾಯಕದ ಬಸವಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
134. ಬಾಲಬೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

135. ವಚನಕಾರ ಬಾಲ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
136. ಬಾಹೂರ ಬೋಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
137. ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
138. ಬೊಕ್ಕಸದ ಚಿಕ್ಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
139. ಭರಿತಾರ್ಪಣದ ಚೆನ್ನಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
140. ಭಿಕಾರಿ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
141. ಕೆಂಭಾವಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
142. ಮನಸಂದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
143. ಮನುಮುನಿ ಗುಮ್ಮಟದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
144. ಕಂದಹಾರದ ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
145. ಮಲಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
146. ಮಹಾದೇವೀರಯ್ಯ ಶರಣರಿಗೆ, ಶರಣು, ಶರಣು ಶರಣಾರ್ಥಿ
147. ಮಳುಬಾವಿಯ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
148. ಮಾದಾರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
149. ಮರುಳುದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
150. ಮಲುಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
151. ಗುರುಕುಲದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
152. ಮಾದಾರ ಧೂಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
153. ಮಾರುಡುಗೆಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
154. ಮಾರೇಶ್ವರೊಡೆಯ ಶರಣರಿಗೆ ಶರಣು, ಶರಣು ಶರಣಾರ್ಥಿ
155. ಮೆರೆ ಮಿಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
156. ಮೇದಾರ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
157. ಮೈದುನ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
158. ರಕ್ಕಸ ಬೊಮ್ಮ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
159. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
160. ರೇಚದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
161. ಲದ್ದೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
162. ವಚನ ಭಂಡಾರಿ ಶಾಂತರಸ ಶರಣರಿಗೆ ಶರಣು, ಶರಣು ಶರಣಾರ್ಥಿ
163. ವರದ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
164. ವೀರ ಗೊಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
165. ವೀರ ಶಂಕರದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
166. ವೇದಮೂರ್ತಿ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
167. ವೈದ್ಯ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
168. ಶಂಕರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
169. ಕಂಬಳಿಯ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
170. ಶಿವನಾಗಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

171. ಸಂಗಮೇಶ್ವರದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
172. ಸಕಲೇಶ ಮಾದರಸ ಶರಣರಿಗೆ ಶರಣು, ಶರಣು ಶರಣಾರ್ಥಿ
173. ಸಗರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
174. ಸತ್ತಿಗೆ ಕಾಯಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
175. ಸಿದ್ಧಾಂತಿ ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
176. ಸಿಮ್ಮಲಿಗೆ ವೀರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
177. ಸೋಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
178. ಸುಂಕದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
179. ಸೂಜಿಕಾಯಕದ ರಾಮಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
180. ಸೊಡ್ಡಳ ಬಾಚರಸ ಶರಣರಿಗೆ ಶರಣು, ಶರಣು ಶರಣಾರ್ಥಿ
181. ಹಡಪದ ರೇಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
182. ಹಾವಿನ ಹಾಳ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
183. ಹುಂಜಿನ ಕಾಳಗದ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
184. ಹೆಂಡದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
185. ಹೊಡೆಹುಲ್ಲ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
186. ಅಗ್ರವಣೆಯ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
187. ನಿಜ ವಿರಕ್ತ ನಿರ್ಲಜ್ಜ ಶಾಂತಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
188. ಸಗರದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
189. ನಿಗಮದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
190. ಕಲಕೇತ ಬ್ರಹ್ಮಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
191. ಮೊರನ ವೇಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
192. ವಾರುಧಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
193. ವೀರಬಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
194. ನಿಜ ಲಿಂಗ ಚಿಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
195. ಪಡಿಹಾರಿ ಉತ್ತಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
196. ಚಿಕ್ಕ ಮಾದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
197. ಮುಗ್ಧ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
198. ಸದ್ಯೋನ್ಮುಕ್ತ ಶರಣ. ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
199. ಸಕಲ ಆದಿ ಪ್ರಮಥ ಗಣಂಗಳಿಗೆ ಶರಣು, ಶರಣು ಶರಣಾರ್ಥಿ
200. ಸಕಲ ವೇದ್ಯ ಶರಣ ಗಣಂಗಳಿಗೆ ಶರಣು, ಶರಣು ಶರಣಾರ್ಥಿ

ಜಯ ಬಸವರಾಜ ಭಕ್ತ ಜನ ಸುರಭೂಜಾ
ಜಯತು ಮಹಕಾರಣಿಕ ಲಿಂಗದೇವನ ಘನತೇಜ
ಜಯತು ಕರುಣಾಸಿಂಧು ಭಜಕ ಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀಗುರು ಬಸವಾ ||
ರಕ್ಷಿಸು ಶ್ರೀ ಗುರು ಬಸವಾ ||

ಲಿಂಗದೇವಾಷ್ಟಕ

ರಚನೆ : ಮಾತಾಜಿ

1. ಶರಣ ಜನ ಪೂಜಿತ ಶ್ರೀ ಲಿಂಗದೇವ
ಮರಣ ಭಯದೂರಕ ಶ್ರೀ ಲಿಂಗದೇವ
ಸೃಷ್ಟಿಕರ್ತ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

2. ಸರ್ವಕಾರಣ ಶ್ರೀ ಲಿಂಗದೇವ
ಸರ್ವಶಕ್ತ ಶ್ರೀ ಲಿಂಗದೇವ
ಸರ್ವವ್ಯಾಪಿ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

3. ನಿರಾಕಾರ ನಿರ್ಗುಣ ಶ್ರೀ ಲಿಂಗದೇವ
ನಿರ್ಮಲ ಚೇತನ ಶ್ರೀ ಲಿಂಗದೇವ
ಪ್ರಣವ ಸ್ವರೂಪ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

4. ವಿಶ್ವತಃ ಚಕ್ಷು ಶ್ರೀ ಲಿಂಗದೇವ
ವಿಶ್ವತೋಬಾಹು ಶ್ರೀ ಲಿಂಗದೇವ
ವಿಶ್ವತಃಪಾದ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

5. ಮಾತಾಪಿತ ರಹಿತ ಶ್ರೀ ಲಿಂಗದೇವ
ಜಗದಾರಾಧ್ಯ ಶ್ರೀ ಲಿಂಗದೇವ
ಲೋಕ ರಕ್ಷಕ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

6. ಜ್ಯೋತಿ ಸ್ವರೂಪ ಶ್ರೀ ಲಿಂಗದೇವ
ಕಾರುಣ್ಯ ನಿಧಿ ಶ್ರೀ ಲಿಂಗದೇವ
ಮಂಗಳರೂಪಿ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

7. ಜನನ ಮರಣ ರಹಿತ ಶ್ರೀ ಲಿಂಗದೇವ
ಭವತಾಪ ಹಾರಕ ಶ್ರೀ ಲಿಂಗದೇವ
ಮುಕ್ತಿದಾತ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

8. ಹೃತ್ಕಮಲವಾಸಿ ಶ್ರೀ ಲಿಂಗದೇವ
ಗುರು ಬಸವ ರೂಪಿತ ಶ್ರೀ ಲಿಂಗದೇವ
ಇಷ್ಟಲಿಂಗರೂಪಿ ಶ್ರೀ ಲಿಂಗದೇವ
ಪೂಜಿಪೆ ನಾ ಘನಲಿಂಗದೇವ

ನೆನಪಿನ ಕಾಣಿಕೆಗಳು

ಶರಣ ಮೇಳಕ್ಕೆ ಬಂದು, ಭಾಗಿಗಳಾಗಿ ಹೋಗುವವರು ತಮ್ಮ ಬಂಧು ಮಿತ್ರರಿಗೆ ತಮ್ಮ ಶಕ್ತ್ಯಾನುಸಾರ ಹಣವನ್ನು ವಿನಿಯೋಗಿಸಿ ನೆನಪಿನ ಕಾಣಿಕೆಯನ್ನು ಒಯ್ಯಬೇಕು. ಚಿಕ್ಕ ಭಾವಚಿತ್ರಗಳು, ಕ್ಯಾಲೆಂಡರ್ ಕಾರ್ಡ್ ಸೈಜ (ರೂ. 1-00), ದೊಡ್ಡ ಸೈಜಿನ ಗೋಡೆಯ ಕ್ಯಾಲೆಂಡರ್ (ರೂ. 16-00), ಬಸವ ಭಾವಚಿತ್ರವಿರುವ ಪೆನ್ನುಗಳು; ಸಾವಿರದ ಆರುನೂರು ವರ್ಷಗಳ ಕ್ಯಾಲೆಂಡರ್ (ಬೆಲೆ 6-00), ಬಸವ ಪ್ರಭೆ (2003 ಇಸವಿಯ ಪಾಕೆಟ್ ಕ್ಯಾಲೆಂಡರ್), ಕೂಡಲ ಸಂಗಮದ ಸಂಗಮೇಶ್ವರ ದೇವಾಲಯ, ಬಸವ ಐಕ್ಯ ಮಂಟಪ, ಬಸವ ಸಾಗರ, ಮಹಾಮನೆ ಮಹಾಮಠದ ಆವರಣದ ಗಣಲಿಂಗ ಮಂಟಪ, ಬಸವ ಧ್ಯಾನ ಮಂಟಪ, ಶರಣರ ಮಂಟಪಗಳ ಚಿತ್ರವಿರುವ ಅತ್ಯಂತ ಸುಂದರ ಆಲ್ಬಮ್ (65 ರೂ.), ಇವುಗಳ ಜೊತೆಗೆ ಈ ವರ್ಷ ಹೊಸದಾಗಿ ಮುದ್ರಣಗೊಂಡಿರುವ ಬಸವಣ್ಣನವರ ವಿವಿಧ ಭಂಗಿಯ ಭಾವಚಿತ್ರಗಳು ವಿವಿಧ ಸೈಜ್‌ಗಳಲ್ಲಿ, ಅಕ್ಕಮಹಾದೇವಿ, ಅಲ್ಲಮ ಪ್ರಭು, ಸಿದ್ಧರಾಮೇಶ್ವರ ಇನ್ನೂ ಹಲವಾರು ರೀತಿಯ ಭಾವಚಿತ್ರಗಳು ಮುಂತಾಗಿ ಒಯ್ಯಬಹುದು.

ಲಡ್ಡು ಮತ್ತು ಕಲ್ಲು ಸಕ್ಕರೆ ಪ್ರಸಾದ : ಶರಣ ಮೇಳದಲ್ಲಿ ಭಾಗಿಗಳಾಗಿ, ಇಲ್ಲಿಂದ ಬಸವ ಪ್ರಸಾದವನ್ನು ಎಲ್ಲರಿಗೂ ಹಂಚಲು ಲಡ್ಡು ಮತ್ತು ಕಲ್ಲು ಸಕ್ಕರೆ ಪೊಟ್ಟಣಗಳನ್ನು ಮರೆಯದೆ ಒಯ್ಯಬೇಕು.

ಬಸವ ಭಾವಚಿತ್ರ ಸಹಿತ ಗೋಡೆ ಗಡಿಯಾರ : ಸುಂದರ ವರ್ಣರಂಜಿತ, ಅಭಯ ಹಸ್ತದ ಬಸವಣ್ಣನವರ ಭಾವಚಿತ್ರ ಒಳಗೊಂಡ ಗೋಡೆ ಗಡಿಯಾರ.

ಸಾದಾ : ಬೆಲೆ 225 ರೂ. ವಿಶೇಷ : 250 ರೂ.

ಸಮಸ್ಯೆ ?- ಸಮಾಧಾನ !

ಮನೋಜ್ ಕುಮಾರ್, ಮೈಸೂರು.- ವೀರಪ್ಪನ್ ಬೇಟೆ ಶತಸ್ಸಿದ್ಧ; ಇಂದು ಅಂತಿಮ ಪ್ರಯತ್ನ ಎಂದು ಎಸ್.ಎಂ. ಕೃಷ್ಣ, ಖರ್ಗೆ ಹೇಳುತ್ತಿದ್ದಾರೆ. ಇದನ್ನು ನಂಬಬಹುದೆ ?

★ ಮಿತ್ರದ್ರೋಹ ಮಹಾಪಾಪ ಎಂದು ಶಾಸ್ತ್ರಗಳು ಹೇಳುತ್ತವೆ. ನಮ್ಮ ಹೈಟೆಕ್, ನಾಜೂಕಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ವೀರಪ್ಪನನ್ನು ಹಿಡಿದು ಜೈಲಿಗೆ ತಳ್ಳುವ ಅಥವಾ ಕಾರ್ಯಾಚರಣೆ ಮಾಡಿ ಕೊಲ್ಲುವ ಮಿತ್ರದ್ರೋಹದಂತಹ ಪಾಪದ ಕೆಲಸ ಖಂಡಿತ ಮಾಡಲಾರರು.

ಚಂದ್ರಶೇಖರ್, ತುಮಕೂರು.- ಪೋಲೀಸ್ ಪಡೆ ಒಮ್ಮೆ ದಾಳಿ ಮಾಡಿದಾಗ ಸರ್ಕಾರಿ ವಾಹನಗಳ ಭರಾಟೆ ಮುಂತಾದ ಸುಳಿವು ತಿಳಿದು ಶ್ರೀ ನಾಗಪ್ಪನವರನ್ನು ಪೊದೆಯಲ್ಲಿ ಕೂರಿಸಿ ವೀರಪ್ಪ ತಪ್ಪಿಸಿಕೊಂಡನಂತೆ. ಇದೆಂತಹ ಗದ್ದಲದ ಕಾರ್ಯಾಚರಣೆ! ಹೀಗಾ ಕಳ್ಳರನ್ನು ಹಿಡಿಯುವುದು ?

★ ಪೋಲೀಸರು ಸೀಟಿ ಊದುತ್ತ ಗಸ್ತು ತಿರುಗುವಾಗ ನಾನು ಅಂದುಕೊಳ್ಳುತ್ತೇನೆ, ಬಹುಶಃ ಅವರು ಹೀಗೆ ಕಳ್ಳರಿಗೆ ಸೂಚನೆ ಕೊಡುತ್ತಿರಬಹುದು.   ನಾವು ಬರುತ್ತಿದ್ದೇವೆ. ನಮ್ಮ ಕಣ್ಣಿಗೆ ಬೀಳದಂತೆ ಅಡಗಿಕೊಳ್ಳಿರಿ   ಎಂದು.

ಫಾಲಾಕ್ಷ, ಕೊಳ್ಳೇಗಾಲ ತಾಲ್ಲೋಕ್.- ಕೊಳ್ಳೇಗಾಲ ತಾಲ್ಲೋಕಿನ ಒಂದು ಗ್ರಾಮದವರು ವೀರಪ್ಪನ್ ದೆಸೆಯಿಂದ ನಮಗೆ ಸಾಕು ಸಾಕಾಗಿದೆ. ಪೋಲೀಸ್ ಪಡೆಯವರು ವೀರಪ್ಪನ್‌ಗೆ ಸಹಾಯ ಮಾಡುವವರು ಎಂದು ಯಾರ್ಯಾರನ್ನೋ ಎಳೆದೊಯ್ದು ಹಿಂಸಿಸುವರು. ನಮ್ಮ ಓರ್ವ ರೈತ ಏನೂ ಅರಿಯದವನು. ಅವನ ಮನೆ ಬಳಿ ಗನ್ ಬುಲೆಟ್, ಸಿಡಿ ಮದ್ದು ಮುಂತಾದ್ದು ಇಟ್ಟು, ಅವನ ಬಳಿ ಸಕ್ಕಿತೆಂದು ಕೇಸ್ ಮಾಡಿದ್ದಾರೆ. ಅವನೋ ತೀರಾ ಮುಗ್ಧ, ಇದಕ್ಕೆ ಏನು ಹೇಳಬೇಕು ?

★ ಅಂಧೇರಾ(ಕತ್ತಲೆ)ನಗರ, ಅಜ್ಞಾನಿ ರಾಜ, ಅವಿವೇಕಿ ಮಂತ್ರಿ ಇವರ ಕಥೆ ಗೊತ್ತಿಲ್ಲವೆ ? ಅದರಲ್ಲಿ ಒಬ್ಬನಿಗೆ ನೇಣಿನ ಕುಣಿಕೆ ಮಾಡಿರುತ್ತಾರೆ ? ಆದರೆ ಆರೋಪಿಯ ಕತ್ತು ಬಹಳ ದಪ್ಪವಾಗಿ ಹಗ್ಗದಲ್ಲಿ ತೂರದಾಗ, ಆ ಹಗ್ಗದ ಕುಣಿಕೆಗೆ ಸರಿ ಹೊಂದುವ ಕುತ್ತಿಗೆಯವನನ್ನು ಕರೆತನ್ನಿ ಎಂದು ರಾಜ ಆಜ್ಞಾಪಿಸುತ್ತಾನೆ ! ಮಂತ್ರಿ ದಾರಿಯಲ್ಲಿ ಹೋಗುವ ಅಮಾಯಕನನ್ನು ಕರೆತರುತ್ತಾನೆ. ಅದೇ ರೀತಿ ನಡೆದಿದೆ ಮುಖ್ಯಮಂತ್ರಿ ಮತ್ತು ಗೃಹಮಂತ್ರಿಗಳ ದರ್ಬಾರು. ಕರ್ನಾಟಕ ರಾಜ್ಯದಲ್ಲಿ, ಅಳುವುದೋ ನಗುವುದೋ ನೀವೇ ನಿರ್ಧರಿಸಿರಿ. ವೀರಪ್ಪನನ್ನು ಹಿಡಿಯುವ ತಾಕತ್ತು ಅದಕ್ಕಿಂತ ಮುಖ್ಯವಾಗಿ ಮನಸ್ಸುಇಲ್ಲದಿರುವ ಪೋಲೀಸ್ ಪಡೆ ಕಾರ್ಯಾಚರಣೆಗೆ ಕೋಟಿಗಟ್ಟಳೆ ಖರ್ಚು ಮಾಡಲಾಗುತ್ತಿದೆ. ಇದರಿಂದ ಏನಾಯಿತು ? ಎಂದು ಕೇಳುವವರಲ್ಲ ಎಂದು ಸಂಕೋಚ(ನಾಚಿಕೆ) ಪಟ್ಟು ಬೆಟ್ಟ ಅಗೆದು ಇಲಿ ತೆಗೆವಂತೆ ಯಾರ್ಯಾರನ್ನೋ ಹಿಡಿತಂದು ವೀರಪ್ಪನ್ ಸಹಚರರನ್ನು ಹಿಡಿದಿರುವುದಾಗಿ ಪತ್ರಿಕೆಗಳಲ್ಲಿ ಪ್ರಚಾರ ಕೊಡುತ್ತಾರೆ, ಅಷ್ಟೇ!

ಚಂದ್ರಕಾಂತ ಬಿರಾದಾರ, ಗುಲಬರ್ಗಾ.- ದ್ವಾಪರಯುಗದ ಕೃಷ್ಣನಿಗೂ ಮುಖ್ಯಮಂತ್ರಿ

ಎಸ್.ಎಂ. ಕೃಷ್ಣರಿಗೂ ವ್ಯತ್ಯಾಸವೇನಿದೆ ?

★ ದ್ವಾಪರ ಯುಗದ ಕೃಷ್ಣ ತಾನು ಸಜ್ಜನ (ಪಾಂಡವರು) ಸಂರಕ್ಷಕ, ದುರ್ಜನ (ಕೌರವರು) ಸಂಹಾರಕ ಎಂದು ಹೇಳಿ, ಧರ್ಮಗ್ಲಾನಿಯಾದಾಗ ಅವತರಿಸಿ ಬರುತ್ತೇನೆ, ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುತ್ತೇನೆ ಎನ್ನುತ್ತಾನೆ. ಆದರೆ ಈ ನಮ್ಮ ಮುಖ್ಯಮಂತ್ರಿ ಕೃಷ್ಣರು ಸಜ್ಜನ (ನಾಗಪ್ಪನಂಥವರ) ಸಂಹಾರಕರು, ದುರ್ಜನ (ವೀರಪ್ಪನ್) ಸಂರಕ್ಷಕರು ಎಂದು ಕೊಳ್ಳೇಗಾಲ ತಾಲ್ಲೋಕಿನ ಜನರು ಮಾತನಾಡುತ್ತಾರೆ.

ರಾಜಶೇಖರ್ ಕೆ.ಎಸ್, ಬೆಂಗಳೂರು.- ವೀರಪ್ಪನ್‌ನಿಂದ ಸುತ್ತೂರು ಜಗದ್ಗುರುಗಳಿಗೆ ಸಹ ಬೆದರಿಕೆ ಇದೆಯಂತೆ. ಅಂದರೆ ವೀರಪ್ಪನ್ ಮೈಸೂರಿನವರೆಗೂ ಬರಲು ಸಾಧ್ಯವೆ ?

★ ಏಕೆ ಸಾಧ್ಯವಿಲ್ಲ ? ಸ್ವತಃ ಮುಖ್ಯಮಂತ್ರಿ ಸಖ್ಯ, ಗೃಹ ಮಂತ್ರಿಗಳ ಬೆಂಬಲ, ಎಸ್.ಟಿ.ಎಫ್‌ನವರ ರಕ್ಷಣೆ ಇರುವ ಗಣ್ಯ ಅತಿಥಿ ವೀರಪ್ಪನ್ ಕಾಡು ಬಿಟ್ಟು ಕಾಮಗೆರೆ ಗ್ರಾಮಕ್ಕೆ ಬಂದು ನಾಗಪ್ಪನವರನ್ನು ಅಪಹರಿಸುವ ಧೈರ್ಯ ಮಾಡಿದ, ಮುಂದೆ ಮೈಸೂರೇನು, ವಿಧಾನ ಸೌಧಕೂ ಬರಬಹುದು ಈಗಾಗಲೇ ಪೋಲೀಸ್ ಇಲಾಖೆಯ ಬೆಳ್ಳಿಯಪ್ಪ ವೀರಪ್ಪನ್‌ನ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆ ?

ವಿ.ಜಿ. ಪಾಟೀಲ್, ಶ್ರೀನಗರ, ಬೆಳಗಾಂವ.- ಕಲ್ಯಾಣ ಕಿರಣದ ಸಮಸ್ಯೆ-ಸಮಾಧಾನ ವಿಭಾಗದಲ್ಲಿ ಮಾತಾಜಿಯವರು ಶ್ರೀಕೃಷ್ಣನನ್ನು ಟೀಕಿಸಿ ಆತನಿಂದಲೇ ವರ್ಣವ್ಯವಸ್ಥೆ ಬಂದುದು ಎಂದು ಹೇಳಿದ್ದಾರೆ. ಆದರೆ ಇವರು ಆ ವರ್ಣ ವ್ಯವಸ್ಥೆಯ ಗುಣ-ಕರ್ಮಗಳ ಆಧಾರದ ಮೇಲಿದೆ ಎಂಬುದನ್ನು ಮರೆತಿದ್ದಾರೆ. ಬಸವಣ್ಣನವರೂ ಕಾಸಿ ಕಮ್ಮಾರನಾದ ಎಂದು ಹೇಳಿಲ್ಲವೆ ? ಇದು ಕ್ಷುಲ್ಲಕ ಟೀಕೆಯಲ್ಲವೆ ?

★ ತಪ್ಪುಗಳನ್ನು ಸಮರ್ಥಿಸಿಕೊಳ್ಳುವ ಚಾಳಿ ಬಹುಪಾಲು ಧಾರ್ಮಿಕರಲ್ಲಿ ಮನೆ ಮಾಡಿಕೊಂಡಿದೆ. ಚತುರ್ವರ್ಣ ಸಾಮಾಜಿಕ ವ್ಯವಸ್ಥೆಗೆ ವಿವರಣೆ ಕೊಡುವಾಗ ಗಾಂಧೀಜಿ   ಇದು ಕಾಯಕದ ವಿಭಜನೆ ತಪ್ಪೇನಲ್ಲ   ಎಂದರು. ಆಗ ಡಾ|| ಅಂಬೇಡ್ಕರ್ ಹೇಳಿದರು   ಅಲ್ಲ, ರೂಢಿಯಲ್ಲಿರುವುದು ಕಾಯಕ ಜೀವಿಗಳ ವಿಭಜನೆ   ಎಂದರು. ಶ್ರೀಕೃಷ್ಣನ ಮಾತು ಹೀಗಿದೆ   ಗುಣ-ಕರ್ಮಗಳ ಆಧಾರದ ಮೇಲೆ ಚತುರ್ವರ್ಣಗಳನ್ನು ಮಾಡಿದ್ದೇನೆ   .

1. ಗುಣದ ಆಧಾರದ ಮೇಲೆ ಮಾಡಿದ್ದರೆ - ಆಗ ಸತ್ವ-ರಜ-ತಮೋ ಗುಣಗಳ ಆಧಾರದ ಮೇಲೆ 3 ವರ್ಣಗಳು ಇರಬೇಕಿತ್ತು. ಹಾಗಾದರೆ ಯಾರು ಸಾತ್ವಿಕರು, ಯಾರು ರಾಜಸಿಕರು, ಯಾರು ತಾಮಸರು. 4 ವರ್ಣಗಳವರನ್ನು ಮತ್ತು ಇದರಿಂದ ಹೊರಗಿಡಲಾದ ಅಸ್ಪೃಶ್ಯರನ್ನು ಯಾವ ಗುಣಗಳಲ್ಲಿ ಸೇರಿಸುತ್ತೀರಿ.

2. ವರ್ಣ ವ್ಯವಸ್ಥೆ ಕರ್ಮಗಳ ಆಧಾರದ ಮೇಲೆ ಆರಂಭವಾದುದು ದಿಟ. ಕಾಸಿದವ ಕಮ್ಮಾರ, ಬಟ್ಟೆ ತೊಳೆದವ ಮಡಿವಾಳ, ಬಟ್ಟೆ ನೆಯ್ದವ ನೇಕಾರ, ವೇದವ ಓದಿದವ ಬ್ರಹ್ಮಜ್ಞಾನಿ ಬ್ರಾಹ್ಮಣ. ಆದರೆ ಆದುದೇನು ? ಕಮ್ಮಾರನ ಮಗ ಕಾಸಲೇ ಬೇಕು, ಮಡಿವಾಳನ ಮಗ ಬಟ್ಟೆ ತೊಳೆಯಬೇಕು. ಬ್ರಾಹ್ಮಣನಿಗೆ ಮಾತ್ರ ಶಾಸ್ತ್ರಾಧ್ಯಾಯನ ಮತ್ತು ಬೋಧೆಯ ಹಕ್ಕು ? ಅದನ್ನೇ ಬಸವಣ್ಣನವರು ಹೇಳಿರುವುದು:   ಲಿಂಗಸ್ಥಲವನರಿದವನೇ ಕುಲಜನು   ಎಂದು. ಆದರರ್ಥ

ಉದ್ಯೋಗದ ಆಧಾರದ ಮೇಲೆ ಮೇಲು-ಕೀಳು ಎನ್ನಬೇಡಿ; ದೇವರನ್ನು ಅರಿತವನು, ಒಲಿಸಿಕೊಂಡವನು ಧನ್ಯ ಎಂದು. ಅತ್ಯಂತ ಬಿಗಿಯಾದ ಈ ವರ್ಗೀಕರಣವನ್ನು ಅದಕ್ಕಾಗಿಯೇ ತಿರಸ್ಕರಿಸಿ ಹೊರಬಂದು ಬಸವಣ್ಣನವರು ಹಾರುವ ಮೊದಲು ಅಂತ್ಯಜ ಕಡೆಯಾಗಿ ಸಂಸ್ಕಾರ ಹೊಂದಿದವರನ್ನು, ಶರಣರೆಂದು, ಸಂಸ್ಕಾರ ಹೊಂದದವರನ್ನು ಭವಿ ಎಂದು, ಅರಿದೊಡೆ ಶರಣ, ಮರೆದೊಡೆ ಮಾನವ ಎಂದು ಹೇಳಿರುವುದು. ನಮ್ಮ ದೇಶದ ಇಂದಿನ ದುಃಸ್ಥಿತಿಗೆ, ಜಾತೀಯತೆ-ಅಸ್ಪೃಶ್ಯತೆಗೆ, ಮತಾಂತರಕ್ಕೆ ಮುಖ್ಯ ಕಾರಣ ಇದೇ ವ್ಯಾಕ್ಯ ಎಂಬುದನ್ನು ಅರಿಯಿರಿ. ಇಲ್ಲದಿದ್ದರೆ ಬುದ್ಧಿವಂತ ಜನಾಂಗವಾದ ಬ್ರಾಹ್ಮಣರಿಂದ ಕೂಡಿದ ಸಮಾಜವನ್ನು ಬಿಟ್ಟು ಬಸವಣ್ಣನವರು ನಮ್ಮಂಥ ದಡ್ಡ ಲಿಂಗಾಯತ ಸಮಾಜ ಕಟ್ಟಲು ಏಕೆ ಶ್ರಮಪಡುತ್ತಿದ್ದರು ? ಸತ್ಯ ಕಠೋರವಿದ್ದರೂ ಅದನ್ನು ಒಪ್ಪಿಕೊಳ್ಳುವುದೇ ಶರಣ ಧರ್ಮ.

ಮೇಘರಾಜ್, ತುಮಕೂರು. - ದಿ. 25-12-2002ರ ಪತ್ರಿಕೆಗಳಲ್ಲಿ ಒಂದು ವಿಷಯ ಬಂದಿದೆ. ಶ್ರೀ ನಾಗಪ್ಪನವರ ಬಿಡುಗಡೆಗೆ ಯತ್ನಿಸಲು ಸಚಿವ ರಾಜೂಗೌಡರು ವೀರಪ್ಪನ್ ಬಳಿಗೆ ಸಂಧಾನಕ್ಕೆ ಹೋಗುತ್ತೇನೆಂದಾಗ ಸುತ್ತೂರು ಜಗದ್ಗುರುಗಳೇ ನಿಮಗೆ ವಯಸ್ಸಾಗಿದೆ, ಬೇಡವೆಂದು ತಡೆದರು ಎಂಬುದಾಗಿ. ಹೋದರೆ ವೀರಪ್ಪನ್ ಏನಾದರೂ ಮಾಡಿಯಾನೆಂಬ ಭಯದಿಂದಲೆ ?

★ ಬೃಹತ್ ಸಂಸ್ಥೆಗಳನ್ನು ಕಟ್ಟಿರುವ ಮಠಾಧೀಶರ ಸಂಕಷ್ಟ ನಿಮಗೇನು ಗೊತ್ತು ? ಅವರ ಧರ್ಮ ಸಂಕಟದ ಬಗ್ಗೆ ನಿಮಗೆ ಅನುಕಂಪವಿರಬೇಕು. ಸರ್ಕಾರದ ನೇತಾರರನ್ನು ಎದುರು ಹಾಕಿಕೊಳ್ಳುವಂತಿಲ್ಲ, ಹಾಕಿಕೊಂಡರೆ ಸಂಸ್ಥೆಗೆ ಕಿರುಕುಳ ಶುರುವಾಗುತ್ತದೆ. ಇಂಥ ವಿಪತ್ಕಾರಿ ವರ್ತನೆ ಪ್ರದರ್ಶಿಸಿದ ತ್ರಿಮೂರ್ತಿಗಳ ಜೋಡಿಯ(ಮುಖ್ಯ, ಗೃಹ, ಜಿಲ್ಲಾ ಉಸ್ತುವಾರಿ ಮಂತ್ರಿಗಳು) ನಡೆಯನ್ನು ಖಂಡಿಸದೆ ಇದ್ದರೆ ಸಮಾಜದ ಜನತೆ ಧರ್ಮಾನುಯಾಯಿಗಳ ಸಂಕಷ್ಟಕ್ಕೆ ಗುರುಗಳು ಸ್ಪಂದಿಸಲಿಲ್ಲ ಎಂದು ಜಿಗುಪ್ಸೆ ಪಡುತ್ತಾರೆ. ಹೀಗಾಗಿ ದೊಡ್ಡ ದೊಡ್ಡ ಸ್ವಾಮಿಗಳು ಉಭಯತರನ್ನು ಸಂತೈಸುವ ಜಾಣ್ಮೆ ತೋರಬೇಕಾಗುತ್ತದೆ. ವ್ಯವಹಾರದಲ್ಲಿ ವೀರಪ್ಪನ್ ನಾಡಿನ ಪಾರ್ಟನರ್ ಆದ ರಾಜೂಗೌಡರ ಕಾಡಿನ ಪಾರ್ಟನರ್. ಅವನು ಗೆಳೆತನದ ವಿಷಯದಲ್ಲಿ ಮಿತ್ರದ್ರೋಹ ಹೇಗೆ ಮಾಡುವನು ? ವೀರಪ್ಪನ್‌ನಿಂದ ರಾಜೂ ಗೌಡರಿಗೆ ಯಾವ ಅಪಾಯವೂ ಇಲ್ಲ. ಸುತ್ತೂರು ಸ್ವಾಮಿಗಳು ಬೇಡವೆಂದರು ಎಂಬುದು ಸುಳ್ಳಿದ್ದರೂ ಇರಬಹುದು. ಏಕೆಂದರೆ ರಾಜಕಾರಣಿಗಳು ಸುಳ್ಳಿನ ಮೊಟ್ಟೆಗಳಲ್ಲವೆ ?

ಹಿರಿಯ ಪೋಲೀಸ್ ಅಧಿಕಾರಿ ಸಾಂಗ್ಲಿಯಾನ ಒಂದು ಪೋಲೀಸ್ ಪಡೆಯ ಸಭೆಯಲ್ಲಿ, 'ವೀರಪ್ಪನ್ ಇರುವ ಸ್ಥಳದ ಮಾಹಿತಿ ಕೊಟ್ಟರೆ ನಾನೇ ಹೋಗಿ ಹಿಡಿದು (ಕೊಂದು) ತರುತ್ತೇನೆ' ಎಂದು ಭಾಷಣ ಮಾಡಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

★ ಮಜ್ಜಿಗೆ ಕುಡಿಯುವವರಿಗೆ ಮೀಸೆ ಹಿಡಿಯಲು ಇನ್ನೊಬ್ಬರು ಬೇಕು, ಎಂದಂತಿದೆ. ಈ ಹಾಸ್ಯಾಸ್ಪದವಾದ ಮಾತು ಉತ್ತರನ ಪೌರುಷ ಒಲೆ(ಹೆಣ್ಣು ಮಕ್ಕಳ)ಮುಂದೆ ಎಂಬಂತೆ ಪೋಲೀಸ್‌ರ ಮುಂದೆ ತಮ್ಮ ಪೌರುಷ(ಹೇಡಿತನ)ಪ್ರದರ್ಶಿಸಿ, ಸಾಂಗ್ಲಿಯಾನಾ ಅವರು ನಗೆ ಪಾಟಲಿಗೆ ಒಳಗಾಗಿದ್ದಾರೆ ಅಷ್ಟೆ.

ಬಸವ ಧರ್ಮ ಸಂಸ್ಥಾಪನಾ ದಿನಾಚರಣೆ ಎಲ್ಲೆಡೆಯಲ್ಲಿ ನಡೆಸಲು ಕರೆ.

ಶರಣ ಬಂಧುಗಳು,

ಯುವನಾಮ ಸಂವತ್ಸರದ ಪುಷ್ಯ ಮಾಸದ ಮಕರ ಸಂಕ್ರಾಂತಿ ದಿನವು (ದಿ. 14-1-1155) ಅತ್ಯಂತ ಮಹತ್ವ ಪೂರ್ಣದಿನ. ಪುರೋಹಿತ ಶಾಹಿ ಗುಡಿಶಾಹಿಗೆ ಬೇಸತ್ತು ವ್ಯಾಕುಲಿತರಾದ ಧರ್ಮಪಿತ ಬಸವಣ್ಣನವರು ಚಿಂತಿತರಾಗಿ ಧ್ಯಾನಾಸಕ್ತರಾದಾಗ ಪರಮತ್ಮನ ದಿವ್ಯಾನುಗ್ರಹ, ಸಾಕ್ಷಾತ್ಕಾರ ಹೊಂದಿದರಲ್ಲದೆ ಇಷ್ಟಲಿಂಗದ ಪರಿಕಲ್ಪನೆ ಪಡೆದುಕೊಂಡು ಜಗತ್ತಿಗೆ ಲಿಂಗಾಯತ ಧರ್ಮದ ಕೊಡುಗೆ ನೀಡಿದ ದಿನ. ಇದನ್ನು ಗುರುತಿಸಿಕೊಂಡು ಬಸವ ಧರ್ಮ ಪೀಠವು ಬಸವೈಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ಶರಣ ಮೇಳವನ್ನು ರೂಢಿಗೆ ತಂದಿದೆ. 5 ದಿವಸಗಳ ಕಾಲ ನಡೆಯುವ ಶರಣ ಮೇಳದ ಪ್ರಮುಖ ವಿಧಿಗಳಾದ ಸಮುದಾಯ ಪ್ರಾರ್ಥನೆ, ವಚನ ಪಠಣ ಜನವರಿ 14 ರಂದು ನಡೆಯುತ್ತವೆ.

ಜನವರಿ 15ಕ್ಕೆ ಇನ್ನಿತರ ಕಡೆ

ಮಕರ ಸಂಕ್ರಾಂತಿಯ ಸಾರ್ವಜನಿಕ ರಜೆಯು ಒಮ್ಮೊಮ್ಮೆ ಜನವರಿ 14 ಕ್ಕೆ ಬರುತ್ತದೆ, ಮತ್ತೊಮ್ಮೆ 15 ಕ್ಕೆ ಬರುತ್ತದೆ. ಮಕಾರ ಸಂಕ್ರಾಂತಿ ದಿನದಂದೇ ಬಸವ ಯೋಗಿ ಸೊಲ್ಲಾಪುರದ ಸಿದ್ಧರಾಮೇಶ್ವರರು ಜನಿಸಿದ್ದು. ಆದ್ದರಿಂದ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳದಲ್ಲಿ ಜನವರಿ 14 ರಂದೇ ಸಮುದಾಯ ಪ್ರಾರ್ಥನೆ-ವಚನ ಪಠಣ ನಡೆಯುತ್ತವೆ. ಬಸವ ಧರ್ಮ ಸಂಸ್ಥಾಪನೆ ಜಗತ್ತಿನ ಒಂದು ವಿಶೇಷ ದಿನ, ಆದ್ದರಿಂದ ಅಂದು ಶರಣ ಮೇಳಕ್ಕೆ ಬಂದು ಪಾಲ್ಗೊಳ್ಳಲಾರದವರು ಸ್ಥಳೀಯವಾಗಿ ಸಮುದಾಯ ಪ್ರಾರ್ಥನೆ ಮತ್ತು ಸಾಮೂಹಿಕ ವಚನ ಪಠಣವನ್ನು ಏರ್ಪಾಡು ಮಾಡಿಕೊಂಡು ಭಾಗವಹಿಸ ಬೇಕು. ರಾಷ್ಟ್ರೀಯ ಬಸವ ದಳಗಳವರು ಸ್ಥಳೀಯ ಕಾರ್ಯಕ್ರಮದ ಏರ್ಪಾಡು ಮಾಡಿ, ಶರಣ ಮೇಳಕ್ಕೆ ಬರಲಾರದವರಿಗೆ ಪ್ರಾರ್ಥನೆ, ವಚನ ಪಠಣಕ್ಕೆ ಅವಕಾಶ ಮಾಡಿಕೊಡುವುದೇ ಅಲ್ಲದೆ, ಪ್ರಸಾದ ದಾಸೋಹವನ್ನು ಸಹ ಏರ್ಪಾಡು ಮಾಡಬೇಕು. ಹಳೆಯ ಮೈಸೂರಿನಲ್ಲಿ ಎಳ್ಳು, ಸಕ್ಕರೆ ಮತ್ತು ಉತ್ತರ ಕರ್ನಾಟಕದಲ್ಲಿ ಕುಸುರೆಳ್ಳನ್ನು ಹಂಚುವ, ವಿನಿಮಯ ಮಾಡಿಕೊಳ್ಳುವ ಪದ್ಧತಿ ಇದೆ. ಬೆಳಿಗ್ಗೆ 10-30 ರಿಂದ 2 ಗಂಟೆವರೆಗೆ ಸಾಮೂಹಿಕವಾಗಿ ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಶರಣರಿಗೆ ಹಂಚಿ, ಸಂಜೆ ಅವರ ಲೌಕಿಕ ಬಂಧುಗಳು, ಮಿತ್ರರು, ಪರಿಚಿತರಿಗೆ ಹಂಚಬಹುದು.

ದಿ. 15-1-2003 ರಂದು ಮಕಾರ ಸಂಕ್ರಾಂತಿಯ ರಜೆ ಬಂದಿರುವುದರಿಂದ ಎಲ್ಲಾ ಕಡೆಯಲ್ಲೂ ದಿ. 15 ರಂದು ಕಾರ್ಯಕ್ರಮದ ವ್ಯವಸ್ಥೆ ಮಾಡುವುದಲ್ಲದೆ ಶ್ರೀ ಸಿದ್ಧರಾಮೇಶ್ವರರ ಜಯಂತಿಯನ್ನು ಆಚರಿಸಿ ಅವರ ಬದುಕು ಬರಹ ಕುರಿಸು ಉಪನ್ಯಾಸ ಏರ್ಪಡಿಸಬೇಕೆಂದು ಸೂಚಿಸುತ್ತೇವೆ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

ನಾಗಪ್ಪನವರ ವಿಷಾದನೀಯ ಅಂತ್ಯದ ಹೊಣೆಯನ್ನು ಕರ್ನಾಟಕ ಸರ್ಕಾರ ಹೊರಲೇಬೇಕು.

(ದಿ. 17-12-2002 ರಂದು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಪ್ರತಿ)

1. ನ್ಯಾಯಾಂಗ ತನಿಖೆ ಏನೂ ಉಪಯೋಗವಿಲ್ಲ ಸಿ.ಬಿ.ಐ ತನಿಖೆಯೇ ಆಗಬೇಕು - ರಾಷ್ಟ್ರೀಯ ಬಸವ ದಳದ ಆಗ್ರಹ
2. ಸಚಿವ ರಾಜೂಗೌಡರನ್ನು ತೀವ್ರವಾದ ತನಿಖೆಗೆ ಗುರಿ ಪಡಿಸಬೇಕು.
3. ಮುಖ್ಯ ಮಂತ್ರಿ ಎಸ್.ಎಂ. ಕೃಷ್ಣ ಮತ್ತು ಗೃಹ ಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರು ತನಿಖೆಗೆ ಅವಕಾಶ ಮಾಡಿಕೊಟ್ಟು ಪ್ರಾಮಾಣಿಕತೆ ಪ್ರದರ್ಶಿಸಬೇಕು.

ಜನಪ್ರಿಯ ರಾಜಕೀಯ ಧುರೀಣರು, ಮಾಜಿ ಸಚಿವರು, ಸಾತ್ವಿಕ ನಡೆನುಡಿಯ ಪ್ರಾಮಾಣಿಕ ವ್ಯಕ್ತಿಯಾಗಿದ್ದ ಶ್ರೀ ಹನೂರಿನ ನಾಗಪ್ಪನವರ ಯಾತನಾಮಯ ಅಂತ್ಯ ಇಡೀ ನಾಡಿನ ಜನರ ಹೃದಯವನ್ನು ಕಲಕಿದೆ. ಮಾತ್ರವಲ್ಲ ಎಸ್.ಎಂ. ಕೃಷ್ಣರವರ ಆಡಳಿತ ವೈಖರಿಯ ವೈಫಲ್ಯವನ್ನು, ಅಸಮರ್ಥತೆಯನ್ನು ಬಹಿರಂಗಪಡಿಸಿದೆ. ಸರ್ಕಾರದ ಶ್ರೀರಕ್ಷೆಯೊಡನೆ ಕಾನೂನಿನ ಬಲ, ಆಧುನಿಕ ಶಸ್ತ್ರಾಸ್ತ್ರ ಎಲ್ಲ ಇದ್ದೂ ಪೋಲೀಸ್ ಇಲಾಖೆಗೆ ಒಬ್ಬ ಕಾಡುಗಳ್ಳನನ್ನು ಹಿಡಿಯಲು ಸಾಧ್ಯವಾಗುತ್ತಿಲ್ಲ ಎಂಬುದು ತೀರ ಅವಮಾನಕರ ಸಂಗತಿ ಎಂದೇ ಇಡೀ ನಾಡಿನ ಜನತೆಯ ಅಭಿಪ್ರಾಯ. ವೀರಪ್ಪನ್ ಕೈಯಲ್ಲಿ ನಾಗಪ್ಪನವರಂಥ ಒಬ್ಬ ಗಣ್ಯ ಧುರೀಣರು ಹತವಾದುದರಿಂದ ಕೇವಲ ಭಾರತದ ಗಮನವನ್ನಷ್ಟೆ ಸೆಳೆದುಕೊಳ್ಳದೆ ಇಡೀ ವಿಶ್ವದ ಜನರ ಗಮನ ಸೆಳೆದುಕೊಂಡ ಕರ್ನಾಟಕ ಸರ್ಕಾರ ಅಳಿಸಲಾರದ ಕಳಂಕವನ್ನು ಇಂದು ಹೊತ್ತಿದೆ ಎಂದೇ ಎಲ್ಲರ ಅಭಿಪ್ರಾಯ. ಆದ್ದರಿಂದ ಮುಖ್ಯ ಮಂತ್ರಿ ಮತ್ತು ಗೃಹ ಮಂತ್ರಿಗಳು ತಮ್ಮ ವೈಫಲ್ಯವನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದೇ ಅಲ್ಲದೆ ತಮ್ಮ ಪ್ರಾಮಾಣಿಕತೆಯನ್ನು ಸಾಬೀತು ಪಡಿಸುವ ಮನಸ್ಸಿದ್ದರೆ ಇಡೀ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ತಕ್ಷಣವೇ ಒಪ್ಪಿಸಬೇಕು ಎಂದು ರಾಷ್ಟ್ರೀಯ ಬಸವ ದಳವು ಆಗ್ರಹಿಸುತ್ತದೆ.

ರಾಷ್ಟ್ರೀಯ ಬಸವ ದಳ ಸಂಗ್ರಹಿಸಿದ ಮಾಹಿತಿ

ರಾಷ್ಟ್ರೀಯ ಬಸವ ದಳವು ವೀರಪ್ಪನ್ ಕಪಿಮುಷ್ಠಿಯಿಂದ ನಾಗಪ್ಪನವರನ್ನು ಬಿಡುಗಡೆ ಮಾಡಿಸಲು ಮಾನವೀಯ ಕಳಕಳಿಯಿಂದ ಒಂದು ಪ್ರಯತ್ನ ಮಾಡಿತು. ಈ ಪ್ರಯತ್ನದ ಹಿಂದಿನ ಉದ್ದೇಶ ವೀರಪ್ಪನ್ ಮನಸ್ಸನ್ನು ಪರಿವರ್ತನೆ ಮಾಡಿ ಆತನನ್ನು ಪಾಶವಿಕ ಬದುಕಿನಿಂದ ನಾಗರಿಕ ಬದುಕಿಗೆ ತರಬೇಕು ಎಂಬುದಾಗಿತ್ತು. ಈ ಪ್ರಯತ್ನಕ್ಕೆ ಕಾಡಿನ ಅಂಚಿನಲ್ಲಿರುವ ಗ್ರಾಮದ ಜನರು ಉತ್ತಮ ರೀತಿಯಲ್ಲಿ ಸ್ಪಂದಿಸಿದರು. ಒಂದು ಕಡೆ ವೀರಪ್ಪನ್ ಭಯ ಇನ್ನೊಂದು ಕಡೆ ಎಸ್.ಟಿ.ಎಫ್ ನವರ ಕಿರುಕುಳದಿಂದ ಬೇಸತ್ತಿರುವ ಜನರಿಗೆ ವೀರಪ್ಪನ್ ಪರಿವರ್ತನೆಗೊಂಡರೆ ತಾವೆಲ್ಲರೂ ನೆಮ್ಮದಿಯಿಂದ ಬದುಕಬಹುದೆಂಬ ಆಶಯವಿದೆ. ಐದೈದು ಜನರಂತೆ ಮೂರು ತಂಡಗಳಲ್ಲಿ ರಾಷ್ಟ್ರೀಯ ಬಸವ ದಳದವರು ಅರಣ್ಯದಲ್ಲಿ ತಿರುಗಾಡುವಾಗ ಗ್ರಾಮಗಳ ಜನರು ಪ್ರೋತ್ಸಾಹಿಸಿದರು. ಮಾತ್ರವಲ್ಲ ವೀರಪ್ಪನ್ ಪರಿವರ್ತನೆ ಹೊಂದಲು ಸಿದ್ಧನೂ ಇದ್ದಾನೆ. ಅವನಿಗೂ ವನವಾಸ ಸಾಕಾಗಿದೆ ಎಂದು ಆತನ ಅಭಿಮಾನಿಗಳು ಹೇಳುತ್ತಿದ್ದರು. ಆದರೆ ಆಳುವವರಿಗೆ ವೀರಪ್ಪನ್ ಪರಿವರ್ತನೆ ಇಷ್ಟವಿಲ್ಲ; ಹೀಗಾಗಿ ಆತ ಹೊರಬರಲು ಹೆದರುತ್ತಾನೆ ಎಂದೂ ಅದೇ ಜನ ಮಾತನಾಡುತ್ತಿದ್ದರು. ಇತಿಹಾಸದಲ್ಲಿ ಎಂತೆಂತಹ ಪಾತಕಿಗಳನ್ನು

ಮಹಾತ್ಮರು ಕ್ಷಮಿಸಿದ್ದಲ್ಲದೆ, ಹಾಗೆ ಕ್ಷಮಿಸಲ್ಪಟ್ಟವರೇ ಉನ್ನತ ವ್ಯಕ್ತಿಗಳಾಗಿರುವ ದಾಖಲೆ ಇದೆ. ಆದರೆ ಮಾನವೀಯ ಕಳಕಳಿ ಇಲ್ಲದೆ, ಬರೀ ಕಾನೂನಿನ ಮಾತನಾಡುವ ಜನರು ವೀರಪ್ಪನ್‌ನಂತಹವರನ್ನು ಕಾಡಿನ ಪಂಜರದಲ್ಲಿಟ್ಟು ಇನ್ನು ಎಷ್ಟು ಜನರನ್ನು ಬಲಿಕೊಡಬೇಕು ಎಂದಿರುವರೋ, ರಾಷ್ಟ್ರದ ಹಣವನ್ನು ಅಪವ್ಯಯ ಮಾಡಬೇಕೆಂದಿರುವರೋ ಯಾರು ಬಲ್ಲರು ? ಎಂದು ಸಂದೇಹ ಪ್ರಜ್ಞಾವಂತರನ್ನು ಕಾಡುತ್ತಿದೆ.

ರಾಷ್ಟ್ರಿಯ ಬಸವ ದಳದ ಕಾರ್ಯಕರ್ತರ ನಿಸ್ಪೃಹ ಪ್ರಯತ್ನವನ್ನು ಅಲ್ಲಿಯ ಜನರು ಬಹಳ ಮೆಚ್ಚಿಕೊಂಡರು. ಆದರೆ ಅವರೆಲ್ಲರ ಸಲಹೆ ಒಂದೇ ಸರ್ಕಾರದವರು ರಾಷ್ಟ್ರೀಯ ಬಸವ ದಳದವರನ್ನು ಅಧಿಕೃತ ಸಂಧಾನಕಾರರೆಂದು ಘೋಷಿಸಿದರೆ ಮಾತ್ರ ನೀವು ಅರಣ್ಯದಲ್ಲಿ ಮುಂದೆ ಸಾಗಬೇಕು. ವೀರಪ್ಪನ್ ಪರಿವರ್ತನೆಯಾಗುವುದು, ಹೊರಜಗತ್ತಿಗೆ ಬರುವುದು ಆಳುವವರಿಗೆ ಇಷ್ಟವಿಲ್ಲದ ಸಂಗತಿಯಾಗಿರುವುದರಿಂದ ಅರಣ್ಯದೊಳಗೆ ಪ್ರವೇಶಿಸುವವರಿಗೆ ವೀರಪ್ಪನ್‌ಗಿಂತ ಎಸ್.ಟಿ.ಎಫ್ ನವರಿಂದಲೇ ಅಪಾಯ ಜಾಸ್ತಿ ಎಂದು ಗ್ರಾಮಸ್ಥರು ಹೇಳತೊಡಗಿದರು. ಕಾಡಿನಂಚಿನ ಜನ ವೀರಪ್ಪನ್‌ಗಿಂತ ಎಸ್.ಟಿ.ಎಫ್ ಬಗ್ಗೆಯೇ ಹೆಚ್ಚು ಭಯಪಡುವುದು ನಮ್ಮ ಕಾರ್ಯಕರ್ತರಿಗೆ ಮನವರಿಕೆಯಾಯಿತು.

ಕೊಳ್ಳೇಗಾಲದಲ್ಲಿ ಅಕ್ಟೋಬರ್ 5 ರಂದು ರಾಷ್ಟ್ರೀಯ ಬಸವ ದಳವು ಹಮ್ಮಿಕೊಂಡ ರ್‍ಯಾಲಿಗೆ ಜನರು ಜಾತಿ ಮತ ಪಂಥ ಧರ್ಮ ಭೇದವಿಲ್ಲದೆ ಸ್ವಯಂ ಪ್ರೇರಣೆಯಿಂದ ಪ್ರವಾಹದಂತೆ ಬಂದುದು ನೋಡಿದಾಗ ನಿಜಕ್ಕೂ ಆಶ್ಚರ್ಯವಾಯಿತು. ಇದು ನಾಗಪ್ಪನವರ ಜನಪ್ರಿಯತೆಗೆ ಸಾಕ್ಷಿಯಾಗಿತ್ತು. ಅಂದಿನ ಮುಖ್ಯ ಬೇಡಿಕೆ ಸಂಧಾನಕಾರರನ್ನು ಬೇಗನೇ ವೀರಪ್ಪನ್ ಬಳಿಗೆ ಕಳಿಸಲು ಆಗ್ರಹ ಮಾಡುವುದರ ಜೊತೆಗೆ, ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರನ್ನು ಅಧಿಕೃತ ಸಂಧಾನಕಾರರೆಂದು ಕರ್ನಾಟಕ ಸರ್ಕಾರ ಘೋಷಿಸಿ ಅನುಮತಿ ಕೊಡಬೇಕೆಂಬುದಾಗಿತ್ತು. ಆದರೆ ಮುಖ್ಯ ಮಂತ್ರಿಗಳಾಗಲಿ ಗೃಹ ಮಂತ್ರಿಗಳಾಗಲಿ ಯಾವುದೇ ರೀತಿ ಸ್ಪಂದಿಸಲಿಲ್ಲ. ಶ್ರೀಮತಿ ಪರಿಮಳಾ, ಅವರ ಪರಿವಾರ, ನಾಗಪ್ಪನವರ ಅಭಿಮಾನಿಗಳ ಕಣ್ಣೀರು ಈ ಉಭಯತರ ಮನಸ್ಸನ್ನು ಕರಗಿಸಲೇ ಇಲ್ಲ.

ರಾಜೂಗೌಡರನ್ನು ತನಿಖೆಗೆ ಒಳಪಡಿಸಲು ಆಗ್ರಹ

ದಿ. 5 ರಂದು ಯಶಸ್ವಿ ರ್‍ಯಾಲಿ ಆದ ನಂತರ ಕರ್ನಾಟಕ ಮತ್ತು ತಮಿಳುನಾಡಿನ ಕೆಲವರು ಪತ್ರಿಕಾ ಕರ್ತರು ನಮ್ಮೊಡನೆ ಪ್ರತ್ಯೇಕವಾಗಿ ಮಾತನಾಡಬೇಕೆಂದರು. ಅದಕ್ಕೆ ಅವಕಾಶ ನೀಡಿದಾಗ ತಿಳಿದು ಬಂದ ವಿಷಯ ಆಘಾತಕಾರಿಯಾಗಿತ್ತು. ನಾಗಪ್ಪನವರನ್ನು ಅಪಹರಿಸುವ ಬಗ್ಗೆ ಪೂರ್ವಭಾವಿ ಭೇಟಿ ಸಚಿವ ರಾಜೂ ಗೌಡರು ಮತ್ತು ವೀರಪ್ಪನ್ ಮಧ್ಯೆ ನಡೆದಿತ್ತು. ಅವರು ಭೇಟಿಯಾದ ಮನೆಯ ಫೋಟೋ ಸಹ ತಮ್ಮ ಬಳಿ ಇರುವುದಾಗಿಯೂ, ಸಿ.ಬಿ.ಐ. ತನಿಖೆಯಾದರೆ ಮಾತ್ರ ಅದನ್ನು ಕೊಡುವುದಾಗಿ ಆ ಪತ್ರಕರ್ತರು ಹೇಳಿದರು. ಮಾತ್ರವಲ್ಲ ಅಪಹರಣದ ದಿನ ಕತ್ತಲಾಗುತ್ತಲೇ ಬಂದ ವೀರಪ್ಪನ್ ರಾಜೂ ಗೌಡರ ತೋಟದಲ್ಲಿ ಉಳಿದು, ನಾಗಪ್ಪನವರ ಮನೆಯ ಚಟುವಟಿಕೆ ಗಮನಿಸಲು ಮೂರು ನಾಲ್ಕು ಬಾರಿ ತನ್ನ ದೂತರನ್ನು ಕಳಿಸಿದ್ದ. ಹೀಗಾಗಿ ಕೊಳ್ಳೇಗಾಲ ತಾಲ್ಲೋಕಿನ ಜನ ನಾಗಪ್ಪನವರ ಅಪಹರಣ ಮತ್ತು ಹತ್ಯೆಯ ಹಿಂದೆ ರಾಜೂ ಗೌಡರ ಪೂರ್ಣ ಕೈವಾಡವಿದೆ ಎಂದು ಹೇಳುತ್ತಾರೆ. ಅಕ್ಟೋಬರ್ 5 ರಂದು ನಡೆದ ಸಂಜೆಯ ಸಭೆಯಲ್ಲಿ ಬಹಿರಂಗವಾಗಿಯೇ ಈ ಮಾತುಗಳನ್ನು ಜನರು ಆಡಿದರು.

ನಾಗಪ್ಪನವರ ಅಪಹರಣವಾಗುತ್ತಲೇ ಹತ್ತು ಹದಿನೈದು ನಿಮಿಷಗಳಲ್ಲಿ ಸುದ್ದಿಯಾಗಿ ಗ್ರಾಮದ ಜನರು ನಾಗಪ್ಪನವರ ಮನೆ ಕಡೆ ಧಾವಿಸುವಾಗ ರಾಜೂ ಗೌಡರ ಕಾರು ನಾಗಪ್ಪನವರ ಮನೆಯ ಮುಂದೆ

ಹಾದು ಹೋಯಿತಂತೆ. ಜನರ ಊಹೆ ಎಂದರೆ ಸ್ಥೂಲ ಕಾಯದ ನಾಗಪ್ಪನವರಿಗೆ ನಡೆಯಲು ಆಗದ್ದರಿಂದ ಕಾರಿನಲ್ಲಿ ಕೂರಿಸಿಕೊಂಡು ದೂರ ಒಯ್ಯಲೆಂದೇ ಕಾರು ಬಂದುದು. ಜನರ ಗುಂಪನ್ನು ಕಂಡ ವೀರಪ್ಪನ್ ರಸ್ತೆ ಬಿಟ್ಟು ಪಕ್ಕಕ್ಕೆ ನುಸುಳಿದ್ದರಿಂದ ಕಾರು ಜನರ ಸಂದೇಹ ಬಲಗೊಳಿಸಲು ಇಷ್ಟವಿಲ್ಲದೆ ಮುಂದೆ ಹೋಯಿತು. ಇದರಿಂದ ವಿಚಲಿತನಾದ ವೀರಪ್ಪನ್ ಅನಿವಾರ್ಯವಾಗಿ ಉದಯರಂಗ ಎಂಬ ಖಾಸಗಿ ಬಸ್ಸನ್ನು ನಿಲ್ಲಿಸಿ ನಾಗಪ್ಪನವರನ್ನು ಕರೆದೊಯ್ಯುವಂತಾಯಿತು.

ಓರ್ವ ಅಭಿಮಾನಿ ಮೋಟರ್ ಬೈಕ್ ತೆಗೆದುಕೊಂಡು ಕೇವಲ 3 ಕಿ.ಮಿ. ದೂರದಲ್ಲಿದ್ದ ಪೋಲೀಸ್ ಕ್ಯಾಂಪಿಗೆ ಹೋಗಿ "ಅವರು ದೂರ ಹೋಗಿಲ್ಲ; ಇಲ್ಲೇ ಇರುತ್ತಾರೆ. ಆದ್ದರಿಂದ ಹುಡುಕಿರಿ ನೋಡಿರಿ." ಎಂದು ಸುಳಿವು ನೀಡಿ ವಿನಂತಿಸಿಕೊಂಡರೆ, ಅಲ್ಲಿನ ಅಧಿಕಾರಿಗಳು ವೀರಪ್ಪನ್ ಹಿಡಿಯಲು, ನಾಗಪ್ಪನವರನ್ನು ರಕ್ಷಿಸಲು ಧಾವಂತವನ್ನು ತೋರದೆ ಮೋಟಾರ್ ಬೈಕ್ ಸಹಿತ ನಾಗಪ್ಪನವರ ಅಭಿಮಾನಿ ಕಾರ್ಯಕರ್ತರನ್ನು ಬೆಳಗಾಗುವವರೆಗೆ ತಮ್ಮಲ್ಲೇ ಹಿಡಿದಿಟ್ಟುಕೊಂಡರಂತೆ. ಇಂಥ ವರ್ತನೆಗಳಿಂದಾಗಿ ನಾಗಪ್ಪನವರ ಅಪಹರಣ ಪೂರ್ವಯೋಜಿತ ಮತ್ತು ಎಸ್.ಟಿ.ಎಫ್ ಬೆಂಬಲಿತ ಎಂದು ಕೊಳ್ಳೇಗಾಲದ ಸುತ್ತಲಿನ ಜನರು ದೃಢವಾಗಿ ನಂಬಿದ್ದಾರೆ.

"ರಾಷ್ಟ್ರೀಯ ಬಸವ ದಳದವರು ಏಕೆ ಕಷ್ಟಪಡುತ್ತೀರಿ ? ವೀರಪ್ಪನ್ ಕೊಳತ್ತೂರು ಮಣಿಗಾಗಿ ಬೇಡಿಕೆ ಇಟ್ಟಿರುವುದು ಏಕೆಂದರೆ ರಾಜಕುಮಾರ್ ಅಪಹರಣ ಪ್ರಕರಣದಲ್ಲಿ ಕೋಟಿಗಟ್ಟಳೆ ಹಣವನ್ನು ವೀರಪ್ಪನ್ ಹೆಸರಿನಲ್ಲಿ ದೊಡ್ಡವರು ದೋಚಿದ್ದಾರೆ. ಮೇಲಿನಿಂದ ಕೆಳಗಿನವರೆಗೆ ಎಲ್ಲರೂ ಹಂಚಿಕೊಂಡಿದ್ದಾರೆ. ಈ ವಿಷಯ ವೀರಪ್ಪನ್‌ಗೆ ಗೊತ್ತಾಗಿದೆ. ಕೊಳತ್ತೂರು ಮಣಿಯೇ ಎಲ್ಲರಿಗೂ ಹಣ ಹಂಚಿದವನು. ವ್ಯಗ್ರಗೊಂಡ ವೀರಪ್ಪನ್ ಮಣಿಯ ಮೂಲಕ ಯಾರ್‍ಯಾರಿಗೆ ಹಂಚಲಾಗಿದೆ ಎಂಬುದನ್ನು ತಿಳಿಯಲು ಆಸಕ್ತನಾಗಿದ್ದಾನೆ. ಇದು ಮಣಿಗೂ ಗೊತ್ತಾಗಿದೆ. ಮಣಿ, ವೀರಪ್ಪನ್ ಭೇಟಿಯಾದರೆ ಸರ್ಕಾರದ ಮುಖ್ಯಸ್ಥರ ಗುಟ್ಟೆಲ್ಲ ಹೊರಬೀಳುತ್ತದೆಯಾದ ಕಾರಣ ಸರ್ಕಾರಕ್ಕೆ ಮಣಿಯನ್ನು ಹೊರಬಿಡಲು ಇಷ್ಟವಿಲ್ಲ, ಮಣಿಗೂ ಹೊರಬರಲು ಮನಸ್ಸಿಲ್ಲ. ಈಗ ಆತ ಸರ್ಕಾರದ ಗೌರವಾನ್ವಿತ ಅತಿಥಿ" ಎಂದು ಸ್ವತಃ ಪತ್ರಕರ್ತರು ಹೇಳಿದಾಗ ನಾವು ದಿಗ್ಭ್ರಾಂತರಾಗಿ ಕುಳಿತು ಬಿಟ್ಟೆವು. ಮರುದಿನ ಬೆಳಿಗ್ಗೆ ಪುನಃ ಅರಣ್ಯ ಪ್ರವೇಶಿಸಲು ಉತ್ಸುಕರಾಗಿದ್ದ ಕಾರ್ಯಕರ್ತರನ್ನು ನಿಯಂತ್ರಿಸಿ, "ನೀವು ಅಧಿಕೃತ ಸಂಧಾನಕಾರರೆಂದು ಸರ್ಕಾರ ಘೋಷಿಸುವವರೆಗೂ ಹೋಗುವುದು ಬೇಡ" ಎಂದು ಹೇಳಿದೆವಲ್ಲದೆ ಶ್ರೀಮತಿ ಪರಿಮಳಾ ಅವರಿಗೆ "ನೀವು ಮುಖ್ಯ ಮಂತ್ರಿ, ಗೃಹಮಂತ್ರಿ, ಪೋಲೀಸ್ ಅಧಿಕಾರಿಗಳ ಅನುಮತಿ ಕೊಡಿಸಿರಿ. ನಾವು ರಾಷ್ಟ್ರೀಯ ಬಸವ ದಳದವರನ್ನು ಅನ್ವೇಷಣೆ ಮತ್ತು ಸಂಧಾನಕ್ಕೆ ಕಳಿಸುತ್ತೇವೆ " ಎಂದು ತಿಳಿಸಿದೆವು.

ಬಹು ಬಗೆಯ ವದಂತಿಗಳಿಂದಾಗಿ ಅಪಹರಣದ ಸೂತ್ರಧಾರರು ಸಚಿವ ರಾಜೂ ಗೌಡರೇ ಎಂಬುದನ್ನು ಚಾಮರಾಜನಗರ ಜಿಲ್ಲೆಯ ಜನರ ಮನಸ್ಸಿನಿಂದ ತೆಗೆದುಹಾಕಲು ಸಾಧ್ಯವಿಲ್ಲ. ಆದ್ದರಿಂದ ರಾಜೂಗೌಡರನ್ನು ತನಿಖೆಗೆ ಒಳಪಡಿಸಿ ಅವರ ಮೇಲೆ ಕ್ರಮ ತೆಗೆದುಕೊಂಡು ಸತ್ಯವನ್ನು ಹೊರತರದೆ ಇದ್ದರೆ, ಈ ಪ್ರಕರಣದಲ್ಲಿ ರಾಜೂಗೌಡರಷ್ಟೆ ಸೂತ್ರಧಾರಿಗಳಲ್ಲ, ಸರ್ಕಾರದ ಮುಖ್ಯಸ್ಥರೂ ಹಿಂದಿದ್ದಾರೆ ಎಂದು ಜನರು ಭಾವಿಸುವುದರಲ್ಲಿ ಉತ್ಪ್ರೇಕ್ಷೆ ಏನಿಲ್ಲ.

ನ್ಯಾಯಾಂಗ ತನಿಖೆ ಬೇಡ - ಸಿ.ಬಿ.ಐ ತನಿಖೆಯೇ ಸೂಕ್ತ

ಇಂದು (17-12-2002) ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ನಾಗಪ್ಪ ಹತ್ಯೆ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಲು ಸಚಿವ ಸಂಪುಟ ತೀರ್ಮಾನಿಸಿರುವುದು ಯಾವ ರೀತಿಯೂ

ಪ್ರಯೋಜನಕಾರಿಯಲ್ಲ. ಕರ್ನಾಟಕದ ಉನ್ನತ ನ್ಯಾಯಾಲಯದ ನ್ಯಾಯ ಮೂರ್ತಿಗಳೇ ಇವತ್ತು ವಿಚಾರಣೆ ಎದುರಿಸುತ್ತಿರುವಾಗ ಇಂಥ ತನಿಖೆಯನ್ನು ನಂಬಲು ಸಾಧ್ಯವೇ ಇಲ್ಲ. ಅದ್ದರಿಂದ ತನಿಖೆಗೆ ಒಂದು ಕಾಲ ಮಿತಿಯನ್ನು ನೀಡಿ ಸಿ.ಬಿ.ಐ ಗೆ ಒಪ್ಪಿಸುವುದೇ ಸೂಕ್ತ ಎಂದು ರಾಷ್ಟ್ರೀಯ ಬಸವ ದಳ ಮತ್ತು ಲಿಂಗಾಯತ ಧರ್ಮ ಮಹಾಸಭಾ ಆಗ್ರಹಿಸುತ್ತವೆ.

ಸತ್ಯವನ್ನು ಬಹಿರಂಗ ಪಡಿಸಿದ ಶ್ರೀ ದಿನಕರ್ ಅವರಂಥ ಪ್ರೌಢ ಅಧಿಕಾರಿಗಳನ್ನು ಹುಚ್ಚ, ಮನೋರೋಗಿ ಎಂದು ಅಪಹಾಸ್ಯ ಮಾಡಿ ವಿಷಯವನ್ನು ಮರೆಸುವ ಕೆಲಸ ಮಾಡದೆ ಮುಖ್ಯ ಮಂತ್ರಿಗಳು ತಮ್ಮ ವಿಫಲತೆಯನ್ನು ಬಹಿರಂಗವಾಗಿ ಒಪ್ಪಿಕೊಳ್ಳಬೇಕು. ಸಿ.ಬಿ.ಐ ತನಿಖೆಗೆ ನಾಗಪ್ಪನವರ ಅಪಹರಣ ಮತ್ತು ಹತ್ಯೆಯ ಪ್ರಸಂಗವನ್ನು ಒಪ್ಪಿಸಿ ತಮ್ಮ ಪ್ರಾಮಾಣಿಕತೆಯನ್ನು ಪ್ರದರ್ಶಿಸಬೇಕು. ಅಧಿಕಾರ ಎಂಬುದು ಹೂವಿನ ಹಾಸುಗೆಯಲ್ಲ ಮುಳ್ಳಿನ ಕಿರೀಟ ಎಂದು ಎಲ್ಲರೂ ಬಲ್ಲರು. "ಬೇಕಾದರೆ ಲಿಂಗಾಯತರು ಬಿಡಿಸಿಕೊಂಡು ಬರಲಿ" ಎಂಬ ಕೀಳುದರ್ಜೆಯ ಮಾತನ್ನಾಡುವ ಡಿ.ಕೆ. ಶಿವಕುಮಾರ್ ಅಂಥವರನ್ನು, ಓರ್ವ ನಿಸ್ಸಹಾಯಕ ಗೃಹಿಣಿ ಪರಿಮಳಾ ಅವರ ನೋವಿಗೆ ಸ್ಪಂದಿಸದೆ ಮನೆಯಿಂದ ಕಾಡಿಗೆ ಊಟ ಮತ್ತು ಔಷಧಿ ಹೋಗುತ್ತದೆ ಎಂಬ ಉಡಾಫೆಯ ಮಾತುಗಳನ್ನಾಡಿದ ರಾಜೂ ಗೌಡರಂಥವರನ್ನು ರಕ್ಷಿಸದೆ, ತಮಗೆ ಹತ್ತಿರುವ ಕಲಂಕ ಮೊದಲು ತೊಡೆದುಕೊಳ್ಳಲಿ. ಡಾ|| ರಾಜ್‌ಕುಮಾರ್ ಅವರನ್ನು ಬಿಡಿಸಿಕೊಂಡು ಬರಲು ತೋರಿಸಿದ ಆಸಕ್ತಿಯನ್ನು ಸರ್ಕಾರದ ಮುಖ್ಯಸ್ಥರು ನಾಗಪ್ಪನವರ ವಿಷಯದಲ್ಲಿ ತೋರಿಸದೆ ಇರಲು ಚಾಮರಾಜನಗರ ಜಿಲ್ಲೆಯ ಜನರು ಕೊಡುವ ವಿವರಣೆ ಎಂದರೆ, "ಹಿಂದಿನ ಪ್ರಸಂಗದಲ್ಲಿ ಅಬಕಾರಿ ದೊರೆಗಳಿಂದ ವಿಪರೀತ ಲಾಭ ದೊರೆಯಿತು. ಈಗ ಹಾಗೆ ಹಣ ಕೊಡುವವರು ಯಾರಿದ್ದಾರೆ ? ನಾಗಪ್ಪನವರು ಜನರನ್ನು ಗಳಿಸಿದ್ದಾರೆಯೇ ವಿನಾ ಹಣಗಳಿಸಿಲ್ಲ" ಎರಡನೆಯ ಕಾರಣ ರಾಜಕೀಯ ಹಿನ್ನೆಲೆಯದು. "ಕಾಂಗ್ರೆಸ್‌ಗೆ ನಾಗಪ್ಪನವರು ಪ್ರಭಾವಶಾಲಿ ಪ್ರತಿಸ್ಪರ್ಧಿ. ಅವರ ಬದುಕನ್ನು ಮುಗಿಸಿದರೆ ಪ್ರಬಲ ಸ್ಪರ್ಧಿಗಳೇ ಇರುವುದಿಲ್ಲ."

ಹೀಗೆ ನಾನಾ ವದಂತಿಗಳ ಮಧ್ಯೆ ಸತ್ಯವು ಎಲ್ಲಿಯೋ ತಪ್ಪಿಸಿಕೊಳ್ಳುತ್ತಿದೆ. ಆದ್ದರಿಂದ ಮುಖ್ಯ ಮಂತ್ರಿ ಶ್ರೀ ಎಸ್.ಎಂ. ಕೃಷ್ಣರವರು ಆದಷ್ಟು ಬೇಗನೆ ಸಿ.ಬಿ.ಐ ತನಿಖೆಗೆ ದಿವಂಗತ ಶ್ರೀ ನಾಗಪ್ಪನವರ ಪ್ರಸಂಗವನ್ನು ಒಪ್ಪಿಸಿ, ನಿಷ್ಕಲಂಕಿತರಾಗಿ ಹೊರಬರಬೇಕೆಂದು ರಾಷ್ಟ್ರೀಯ ಬಸವ ದಳ ಮತ್ತು ಲಿಂಗಾಯತ ಧರ್ಮ ಮಹಾಸಭಾಗಳು ಆಗ್ರಹಿಸುತ್ತವೆ ಎಂದು ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ, ಬೆಂಗಳೂರು ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ದೇವಿಕಾ ಶರಣಪ್ಪನವರು, ನಾಗಪ್ಪನವರ ಅನ್ವೇಷಣೆಗೆ ಅರಣ್ಯಕ್ಕೆ ಹೋಗಿದ್ದ ರಾಷ್ಟ್ರೀಯ ಬಸವ ದಳದ ಪ್ರಧಾನ ಸಂಘಟಕರಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಉಪಸ್ಥಿತರಿದ್ದರು.

ಶರಣ. ಎನ್. ಪುಟ್ಟರುದ್ರ,
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷರು, ರಾಷ್ಟ್ರೀಯ ಬಸವ ದಳ

ಪತ್ರಿಕಾ ವರದಿಯಲ್ಲಿ ತಿದ್ದುಪಡಿಗೆ ಕೋರಿಕೆ

ಮಾನ್ಯ ಸಂಪಾದಕರು
ಪ್ರಜಾವಾಣಿ ದಿನಪತ್ರಿಕೆ
ಬೆಂಗಳೂರು.

ಮಾನ್ಯರೇ,

ನಿನ್ನೆ ಬೆಂಗಳೂರಿನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ನೀಡಿದ ವಿವರಗಳು ಇಂದು ಪ್ರಜಾವಾಣಿಯಲ್ಲಿ ಪ್ರಕಟವಾಗಿವೆ. ಅದಕ್ಕಾಗಿ ಧನ್ಯವಾದಗಳು. ಆದರೆ ನಮ್ಮ (ರಾಷ್ಟ್ರೀಯ ಬಸವ ದಳ) ಕಾರ್ಯಕರ್ತರನ್ನು ಸರ್ಕಾರ ಅಧಿಕೃತ ಸಂಧಾನಕಾರರು ಎಂದು ಬಿಂಬಿಸಲಿಲ್ಲವಾದ ಕಾರಣ ಎಸ್.ಟಿ.ಎಫ್ ನವರು ಅವರನ್ನು ಕಾಡಿನೊಳಕ್ಕೆ ಬಿಡಲಿಲ್ಲ ಎಂದು ಅವರು ದೂರಿದ್ದಾರೆ ಎಂದು ಇಂದಿನ (ದಿ. 18-12-2002, ಪುಟ 5) ಸಂಚಿಕೆಯಲ್ಲಿ ಪ್ರಕಟವಾಗಿದೆ.

ಈ ರೀತಿ ನಾನು ಹೇಳಿಯೂ ಇಲ್ಲ, ಲಿಖಿತ ರೂಪದಲ್ಲೂ ಕೊಟ್ಟಿಲ್ಲ.

ರಾಷ್ಟ್ರೀಯ ಬಸವ ದಳದವರು ನಾಗಪ್ಪನವರ ಬಿಡುಗಡೆಗೆ ಅರಣ್ಯದೊಳಕ್ಕೆ ಹೋಗಬಯಸುತ್ತಾರೆ ಎಂದು ಅಧಿಕೃತವಾಗಿ ಅರ್ಜಿಯನ್ನು ಸಲ್ಲಿಸಿದಾಗ, ಶ್ರೀಮತಿ ಪರಿಮಳಾ ಅವರು ಅದನ್ನು ಅನುಮೋದಿಸಿದಾಗ ಶ್ರೀ ಜ್ಯೋತಿ ಪ್ರಕಾಶ ಮಿರ್ಜಿಯವರು ಮೌಖಿಕವಾಗಿ ದೂರವಾಣಿ ಮೂಲಕ ಅನುಮತಿಕೊಟ್ಟರು. ಬೆಂಗಾವಲಿಗೆ ಸಿಬ್ಬಂದಿಯನ್ನು ಕೊಡಲು ಇಚ್ಛಿಸಿದರು. ಪೋಲೀಸರನ್ನು ಕಂಡರೆ ವೀರಪ್ಪನ್ ಕೆರಳಬಹುದೆಂದು ನಾವು ಪೋಲೀಸರನ್ನು ಜೊತೆಗೆ ಕರೆದೊಯ್ಯಲು ಇಷ್ಟಪಡಲಿಲ್ಲ. ಸ್ವತಃ ಜೀಪ್ ಕಳಿಸಿ ಅರಣ್ಯದ ಅಂಚಿನವರೆಗೆ ನಮ್ಮ ಕಾರ್ಯಕರ್ತರನ್ನು ಕಳಿಸಿಕೊಟ್ಟರು. ಮತ್ತೊಮ್ಮೆ ಎಸ್.ಟಿ.ಎಫ್‌ನ ಮೂವರು ಅರಣ್ಯದ ಮಧ್ಯೆ ನಮ್ಮ ಕಾರ್ಯಕರ್ತರಿಗೆ ಸಿಕ್ಕರು. ರಾಷ್ಟ್ರೀಯ ಬಸವ ದಳದವರು ರಾತ್ರಿ ಅಲ್ಲೇ ಉಳಿಯುವುದನ್ನು ಕಂಡು ಆಶ್ಚರ್ಯಪಟ್ಟು ನೀವು ಧೈರ್ಯಶಾಲಿಗಳು ಎಂದೂ ಮೆಚ್ಚಿದ್ದಾರೆ.

ಖರ್ಚು-ವೆಚ್ಚಗಳಿಗೆ, ಮಾಹಿತಿದಾರರಿಗೆ ಕೊಡಲು ಹಣ ಬೇಕಾದರೂ ಕೊಡುತ್ತೇವೆ ಎಂದು ಸೌಜನ್ಯದಿಂದ ಎಸ್.ಟಿ.ಎಫ್ ಅಧಿಕಾರಿಗಳು ತಿಳಿಸಿದಾಗ ನಮ್ಮ ಕಾರ್ಯಕರ್ತರು ಹಣ ಪಡೆಯಲು ಇಷ್ಟಪಟ್ಟಿಲ್ಲ ಮತ್ತು ಎಸ್.ಟಿ.ಎಫ್‌ನ ಅನೇಕರು, ನಿಮ್ಮ ಪ್ರಯತ್ನದಿಂದಲಾದರೂ ವೀರಪ್ಪನ್ ಪಾಶವಿಕ ಪ್ರವೃತ್ತಿ ತೊರೆಯುವಂತಾಗಲಿ ಎಂದ ಅಭಿಪ್ರಾಯ ಸೂಚಿಸಿದ್ದಾರೆ.

ಸರ್ಕಾರದ ವತಿಯಿಂದ ಅಧಿಕೃತ ಸಂಧಾನಕಾರರೆಂದು ರಾಷ್ಟ್ರೀಯ ಬಸವ ದಳದವರನ್ನು ಘೋಷಿಸದಿದ್ದರೆ ವೀರಪ್ಪನ್ ನಿಮ್ಮೊಡನೆ ಮಾತನ್ನಾಡುವುದಿಲ್ಲ, ಭೇಟಿಯಾಗುವುದಿಲ್ಲ ಎಂಬ ವೀರಪ್ಪನ್ ಸಹಚರರ ಸಲಹೆ ಲಭ್ಯವಾದ ನಂತರ, ಅಕ್ಟೋಬರ್ 5 ರಂದು ಬೃಹತ್ ರ್‍ಯಾಲಿ ನಡೆಸಿದೆವು. ಕೊಳ್ಳೇಗಾಲದ ಅಸಿಸ್ಟೆಂಟ್ ಕಮೀಷನರ್ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಮುಖ್ಯ ಬೇಡಿಕೆ ಎಂದರೆ, ಬೇಗನೆ ವೀರಪ್ಪನ್ ಬಯಸುವ ಸಂಧಾನಕಾರರನ್ನು ಕಳಿಸಿರಿ. ಇಲ್ಲವೇ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ಅಧಿಕೃತ ಸಂಧಾನಕಾರರಾಗಿ ಬರುತ್ತಾರೆ ಎಂದು ವೀರಪ್ಪನ್‌ಗೆ ರೇಡಿಯೋ, ವಾರ್ತಾಪತ್ರಿಕೆಗಳ ಮೂಲಕ ತಿಳಿಸಿರಿ. ನಮ್ಮವರು ಹೋಗಲು ಸಿದ್ಧರಿದ್ದಾರೆ ಎಂಬುದಾಗಿತ್ತು.

ಈ ಮನವಿಗೆ ಸರ್ಕಾರವು ಸ್ಪಂದಿಸದೆ, ಸಂಧಾನಕಾರರನ್ನೂ ಕಳಿಸಲು ವಿಳಂಬ ಮಾಡಿದ್ದು ನಾಗಪ್ಪನವರು ದುರಂತ ಅಂತ್ಯವನ್ನು ಕಾಣುವಂತಾಯಿತು ಎಂಬುದೀಗ ಸತ್ಯವಾಯಿತು.

ಎಸ್.ಟಿ.ಎಫ್‌ನವರು ಸಂಪೂರ್ಣ ಸಹಕಾರ ನೀಡಿದ್ದಾರೆ. ಈ ವಿಷಯದಲ್ಲಿ ಅಸಹಕಾರ ಮಾಡಿರುವುದು ಮುಖ್ಯಮಂತ್ರಿ ಮತ್ತು ಗೃಹಮಂತ್ರಿಗಳು ಎಂಬುದನ್ನು ತಾವು ಸ್ಪಷ್ಟೀಕರಿಸಬೇಕೆಂದು ಕೋರುತ್ತೇವೆ.

ಸಹಕಾರವನ್ನೂ ನಿರೀಕ್ಷಿಸುವ

ಶರಣ. ವೀರಣ್ಣ ಕೊರ್ಲ್ಹಳ್ಳಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ರಾ.ಬ.ದಳ
ಮತ್ತು ಅರಣ್ಯದಲ್ಲಿ ಪ್ರವೇಶಿಸಿದ್ದ ಒಂದು ತಂಡದ ಮುಂದಾಳು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಅಧ್ಯಕ್ಷರು ರಾ.ಬ.ದಳ (ಕೇಂದ್ರ)
ಬೆಂಗಳೂರು.

ಉದಗೀರ್ ರಾಷ್ಟ್ರೀಯ ಬಸವ ದಳದ ನೇತೃತ್ವದಲ್ಲಿ ಸ್ವಚ್ಛತಾ ಅಭಿಯಾನ : ಜನ ಜಾಗೃತಿ ಯಾತ್ರೆ

ಉದಗೀರ್, ಡಿ: 1- ರಾಷ್ಟ್ರೀಯ ಬಸವ ದಳ ಇದು ರಾಷ್ಟ್ರಮಟ್ಟದ ಸ್ವಯಂ ಸೇವಾ ಸಂಘಟನೆಯಾಗಿದ್ದು, ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಇದು ವ್ಯಾಪಿಸಿದೆ. ಈಗ ಮಹಾರಾಷ್ಟ್ರದಲ್ಲಿಯೂ ಕೂಡ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದೆ. ಗಣನಾಯಕಿ ಶರಣೆ. ಲಕ್ಷ್ಮೀಬಾಯಿ ಪಾಂಡ್ರೆಯವರ ನೇತೃತ್ವದಲ್ಲಿ ಉದಗೀರ ಶಹರ್‌ದಲ್ಲಿ ರಾಷ್ಟ್ರೀಯ ಬಸವ ದಳ ಸಂಘಟನೆಯು ಪ್ರಬಲವಾಗಿ ಬೆಳೆಯುತ್ತಿದೆ. ಇಂಥ ಸಂಘಟನೆಗಳು ಇಂದು ನಮ್ಮ ದೇಶಕ್ಕೆ ಅತ್ಯವಶ್ಯಕವಾಗಿವೆ ಎಂದು ಮಹಾರಾಷ್ಟ್ರದ ಲಾತೂರ ಜಿಲ್ಲೆಯ ಉದಗೀರ್‌ನಗರ ಪರಿಷದ್(ಪಾಲಿಕೆ) ಅಧ್ಯಕ್ಷೆ ಶರಣೆ. ಉಷಾ ಮನೋಹರ ಕಾಂಬಳೆಯವರು ಹೃದಯ ಬಿಚ್ಚಿ ಮಾತನಾಡಿದರು.

ಅವರು ಕಳೆದ ಡಿಸೆಂಬರ್ 1 ರಂದು ಉದಗೀರ್ ನಗರದಲ್ಲಿ ಮಹಾರಾಷ್ಟ್ರ ಸರಕಾರದ ವತಿಯಿಂದ ಹಮ್ಮಿಕೊಳ್ಳಲಾದ ಸಂತ ಗಾಡಗೆ ಬಾಬಾ ನಗರ ಸ್ವಚ್ಛತಾ ಅಭಿಯಾನ್ ನಿಮಿತ್ತ ರಾಷ್ಟ್ರೀಯ ಬಸವ ದಳ ಉದಗೀರ ಘಟಕವು ಏರ್ಪಡಿಸಿದ್ದ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತ, ನಗರಗಳ ಸ್ವಚ್ಛತೆ ಮತ್ತು ಸೌಂದರ್ಯ ಕಾಪಾಡುವ ಉದ್ದೇಶದಿಂದ ಮಹಾರಾಷ್ಟ್ರ ಸರಕಾರವು ಈ ಯೋಜನೆ ಹಾಕಿಕೊಂಡಿದೆ. ಸ್ವಚ್ಛತೆ ಕುರಿತು ಜನ ಜಾಗೃತಿ ಮಾಡಲು ಮತ್ತು ಸ್ವತಃ ತಾವೇ ಸ್ವಚ್ಛತಾ ಕಾರ್ಯಕ್ಕೆಕೊಳ್ಳಲು ಮಹಾರಾಷ್ಟ್ರದಲ್ಲಿ ಹಲವಾರು ಸಂಘ-ಸಂಸ್ಥೆಗಳು ಮುಂದೆ ಬಂದಿವೆ. ಆದರೆ ಉದಗೀರ್‌ನಲ್ಲಿ ಕ್ರ.ಸಂ. 2 ನೇ ವಿಭಾಗವನ್ನು ದತ್ತು ಪಡೆದು ಇಡೀ ನಗರಾದ್ಯಂತ ಸ್ವಚ್ಛತೆ ಕುರಿತು ಜಾಗೃತಿಗೊಳಿಸಿದ ಏಕೈಕ ಸಂಘಟನೆ ರಾಷ್ಟ್ರೀಯ ಬಸವ ದಳ. ಅದರಲ್ಲೂ ವಿಶೇಷವಾಗಿ ಶರಣೆಯರು ಎಂದು ಅವರು ಸೇವೆಯನ್ನು ಕೊಂಡಾಡಿದರು.

ಜನ ಜಾಗೃತಿ ಯಾತ್ರೆಯ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷರಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿಯವರು ಪ್ರವಚನ ನೀಡಿ ಸಂತ ಗಾಡಗೆ ಮಹಾರಾಜ ಅವರು ಒಬ್ಬ ಸಮಾಜ ಸೇವಕ ಹಾಗೂ ಮಹಾತ್ಮರಾಗಿದ್ದರು. ಅವರ ಹೆಸರಿನಲ್ಲಿ ಮಹಾರಾಷ್ಟ್ರ ಸರಕಾರವು ಇಂಥ ಸ್ವಚ್ಛತಾ ಅಭಿಯಾನ ನಡೆಸುತ್ತಿರುವುದು ಶ್ಲಾಘನೀಯ. ಮಹಾರಾಷ್ಟ್ರದ ಜನಗಳಲ್ಲಿರುವ ದೇಶಭಕ್ತಿ, ಸಾಮಾಜಿಕ ಕಳಕಳಿ ಭಾಷಾಭಿಮಾನ ನಿಜವಾಗಿಯೂ ಮೆಚ್ಚುವಂಥದ್ದು. ರಾಷ್ಟ್ರೀಯ ಬಸವ ದಳದ ವತಿಯಿಂದ 2 ನೇ ವಿಭಾಗವನ್ನು ದತ್ತು ತೆಗೆದುಕೊಳ್ಳಲಾಗಿದೆ. ಇಡೀ ನಗರವೇ ಸ್ವಚ್ಛವಾಗಲಿ ಎಂದು ಹಾರೈಸಿದ ಶ್ರೀಗಳು ಅಂತರಂಗ ಮತ್ತು ಬಹಿರಂಗವೆರಡೂ ಶುದ್ಧವಾಗಬೇಕೆಂದು ಹೇಳಿದರು.

ಬೀದರ ರಾಷ್ಟ್ರೀಯ ಬಸವ ದಳದ ಮುಖಂಡರಾದ ಶರಣ. ಶಿವರಾಜ ಪಾಟೀಲ ಅತಿವಾಳ, ಶರಣ. ಗಂಗಶೆಟ್ಟಿ ಪಾಟೀಲ ವಕೀಲರು, ಶರಣ. ಶಿವಲಿಂಗಯ್ಯ ಸ್ವಾಮಿ ಹುಲಸೂರ, ಶರಣ. ಶಿವಶರಣಪ್ಪ ಪಾಟೀಲ ಮತ್ತಿತರ ಗಣ್ಯರು ಮತ್ತು ಕರ್ನಾಟಕ-ಮಹಾರಾಷ್ಟ್ರ ಗಡಿಭಾಗದ ಎಲ್ಲ ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು ಮುಖಂಡರು ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ನಗರ ಪರಿಷತ್ ಸದಸ್ಯರಾದ ಶರಣೆ. ವಂದನಾ, ಶರಣರಾದ ಬಾಬುರಾವ್ ಪಾಂಡ್ರೆ, ಬಸವರಾಜ ಬಾಗಬಂದೆ, ಉದಗೀರ ರಾಷ್ಟ್ರೀಯ ಬಸವ ದಳದ ಶರಣೆಯಾದ ಲಕ್ಷ್ಮೀಬಾಯಿ ಪಾಂಡ್ರೆ, ಗೋದಾವರಿ ವಾರದ, ಸರೋಜನಿ ಡಾಂಗೆ, ಚಂದ್ರಕಲಾ ಸ್ವಾಮಿ, ನಾಗಮ್ಮ ಚಂದ್ರಕಾಂತ ಸ್ವಾಮಿ, ಗುಣವಂತಿ ವಿತಾರೆ, ಸಂಜು ಪಾಂಡ್ರೆ, ಶರಣೆ. ಮಹಾನಂದಾ ಪಂಚಯ್ಯ ಸ್ವಾಮಿ, ಲಕ್ಷ್ಮೀ ಬಾಗಬಂದೆ, ಛಾಯಾ ಬಸವರಾಜ ಬಾಗಬಂದೆ, ಮುಕ್ತಾಬಾಯಿ ಪಾಂಡ್ರೆ ಮುಂತಾದವರು ಪಾಲ್ಗೊಂಡಿದ್ದರು. ಬೀದರಿನ ನೂರಾರು ಶರಣ ಶರಣೆಯರು ಘೋಷಣೆಗಳನ್ನು ಕೂಗುತ್ತ ರ್‍ಯಾಲಿಯಲ್ಲಿ ಭಾಗವಹಿಸಿದರು. ಕಲ್ಯಾಣ ಜ್ಯೋತಿಯ ನೇತೃತ್ವದಲ್ಲಿ ರ್‍ಯಾಲಿ ನಡೆಯಿತು. ಒಂದು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಜನರು ಸೇರಿದ್ದರು. ರ್‍ಯಾಲಿಯ ನಂತರ ಪೂಜ್ಯ ಸ್ವಾಮಿಗಳು ಮತ್ತು ಕಾರ್ಯಕರ್ತರು ಪೊರಕೆ ಮತ್ತು ಕಸದ ಬುಟ್ಟಿಗಳನ್ನು ತೆಗೆದುಕೊಂಡು 4 ಗಂಟೆಗಳವರೆಗೆ ಕಸಗುಡಿಸಿ, ನಗರವನ್ನು ಸ್ವಚ್ಛಗೊಳಿಸಿ ಪ್ರಯೋಗಾತ್ಮಕವಾಗಿ ಮಾಡಿ ತೋರಿಸಿದರು.

1. ಅಲ್ಲಮ ಪ್ರಭುದೇವರ ಮಂಗಲ

ಬೆಳಗುವೆ ಬೆಳಗುವೆ ಮಂಗಲದಾರತಿ
ಜಂಗಮ ಜ್ಯೋತಿ ಅಲ್ಲಮ ಪ್ರಭುವಿಗೆ ॥ಪ॥

ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವಿಯ ನೆಲದಿ
ಸುಜ್ಞಾನಿ ಮಾತೆಯ ಚಿದ್ಗರ್ಭದಿ ಜನಿಸಿ
ತಂದೆ ನಿರಂಕಾರನ ವಾತ್ಸಲ್ಯದಲಿ ಬೆಳೆದು
ದೇವನನೆ ನೆರೆ ನಂಬಿ ಶಿವಪಥದಲಿ ನಡೆದ ॥1॥

ಅನಿಮಿಷ ಯೋಗಿಯಿಂ ದೀಕ್ಷೆಯಂ ಹೊಂದಿ
ಹರಿಯುವ ತೊರೆಯೊಲು ಅರಿವನು ನೀಡುತ
ಬಗೆ ಬಗೆ ಸಿದ್ಧಿಯ ಸಾಧಿಸಿ ಪಡೆದು
ಬಸವ ಯೋಗ ಮಾರ್ಗಕೆ ಪ್ರೇಮದಿ ಒಲಿದ ॥2॥

ಗುರು ಬಸವ ಪಥವನು ಮುದದಿಂದ ಹಿಡಿದು
ಶರಣರ ಪ್ರೇಮದ ಬಿನ್ನಹಕೆ ಒಲಿದು
ಬಸವ ಕಲ್ಯಾಣದ ಅನುಭವ ಮಂಟಪದಿ
ಶ್ರೀ ಶೂನ್ಯ ಪೀಠವನು ಏರಿದ ಜಗದ್ಗುರು ॥3॥

ನಾನು ನನ್ನದೆಂಬ ಮಮಕಾರವಳಿದು
ಎಲ್ಲರು ನನ್ನವರೆಂಬ ಭೂಮಭಾವ ಬೆಳೆದು
ಕದಳಿಯ ಬನದಲ್ಲಿ ಲಿಂಗದೇವನ ಬೆರೆದ
ಸಚ್ಚಿದಾನಂದ ಶರಣ ಅಲ್ಲಮಪ್ರಭುಯೋಗಿ ॥4॥

2. ಚನ್ನಬಸವಣ್ಣನ ಮಂಗಲ

ಬೆಳಗುವೆ ಬೆಳಗುವೆ ಮಂಗಲದಾರತಿ
ಜಂಗಮ ಜ್ಯೋತಿ ಚನ್ನಬಸವೇಶಗೆ ॥ಪ॥

ಗುರು ಬಸವ ತಂದೆಯ ಕರಕಮಲ ಜನಿತನೆ
ಶರಣರ ಹೃದಯದ ಶ್ರೀ ಪರಮ ಹಂಸೆಯೆ
ಅಕ್ಕನಾಗಲಾಂಬಿಕೆಯ ಮಮತೆಯ ಕಂದನೆ
ಅಯ್ಯ ಶಿವದೇವನ ಪ್ರೇಮದ ಪುತ್ರನೆ ॥1॥

ಕಲ್ಯಾಣ ಪುರದೊಳು ಜನನವ ಹೊಂದಿ
ಉಳಿವೆಯ ಕ್ಷೇತ್ರದಿ ಲಿಂಗದೇವನ ಬೆರೆದು
ಎಳೆವರೆಯದಲ್ಲೇ ಆತ್ಮಜ್ಞಾನಿಯಾಗಿ
ವಿರತಿಯ ಪಥದೊಳು ಮುನ್ನಡೆದ ಮಹಿಮನೆ ॥2॥

ಧರ್ಮಪಿತ ಬಸವರು ಕೊಟ್ಟಿಹ ಧರ್ಮವ
ತತ್ತ್ವದ ನೆಲೆಯಲಿ ಸ್ಫುಟವಾಗಿ ನೀಡಿ
ಷಟಸ್ಥಲ ಚೌಕಟ್ಟಿಗೆ ವಚನಗಳನ್ನಿರಿಸಿ
ಅರಿವಿನ ನಿಧಿಯಾಗಿ ಮೆರೆದ ಸುಜ್ಞಾನಿ ॥3॥

ಶರಣ ಧರ್ಮಕೆ ಸಂಕಷ್ಟ ಬರಲು
ಕಾಷಾಯ ಧರಿಸಿಯು ಖಡ್ಗವ ಹಿಡಿದೆ
ವಚನ ವಾಙ್ಮಯವ ರಕ್ಷಿಸಿದ ವಿರಾಗಿ
ಸಚ್ಚಿದಾನಂದ ಕಿರಣ ಚನ್ನಬಸವ ಯೋಗಿ ॥4॥

3. ಸಿದ್ಧರಾಮೇಶ್ವರ ಮಂಗಲ

ಬೆಳಗುವೆ ಬೆಳಗುವೆ ಮಂಗಲದಾರತಿ
ಜಂಗಮ ಜ್ಯೋತಿ ಸಿದ್ಧರಾಮೇಶಗೆ ॥ಪ॥

ಸುಗ್ಗವ್ವೆ ಮುದ್ದುಗೌಡ ದಂಪತಿ ಗರ್ಭದಿ
ಸೊನ್ನಲಾಪುರದಲ್ಲಿ ಜನನವಂ ಹೊಂದಿ
ನಂಬಿದ ಭಕ್ತರ ಮಮತೆಯಿಂ ಪೊರೆಯಲು
ಇಂಬಿನಿಂ ವಿರತಿಯ ಪಥವನು ಹಿಡಿದ ॥1॥

ಗುರು ಚನ್ನಬಸವನ ಕರಜನಿತನಾಗಿ
ವರಗುರು ಬಸವನ ಕರುಣೆಯ ಪಡೆದು
ಅನುಭಾವ ಸಿರಿಯನು ಉರದಲಿ ಧರಿಸಿ
ಸುಜ್ಞಾನ ಬೆಳಗಿನಿಂ ಮೆರೆದಿಹ ಶಿವಗುರು ॥2॥

ಅನುಭವ ಮಂಟಪದ ಚಿಜ್ಯೋತಿಯಾಗಿ
ವಚನದ ನುಡಿಗಳ ಹೃದಯದಿಂ ಉಲಿದು
ಪರಮಾರ್ಥ ಕೆರೆಯನು ಪ್ರೇಮದಿ ಕಟ್ಟಿ
ಅರಿವಿನ ಜಲವನು ಲೋಕಕೆ ನೀಡಿದ ॥3॥

ದಾರ್ಶನಿಕ ಕ್ಷೇತ್ರದ ದಿಗ್ಗಜವಾಗಿ
ವರ್ಷಿಸಿ ಕರುಣೆಯ ಸುಜಲವ ತ್ಯಾಗಿ
ಘನಯೋಗಿನಾಥಗೆ ಒಲಿದ ವಿರಾಗಿ
ಸಚ್ಚಿದಾನಂದ ಸುತ ಸಿದ್ಧರಾಮಯೋಗಿ ॥4॥

4. ನೀಲಾಂಬಿಕಾದೇವಿ ಮಂಗಲ

ಜಯತು ಜಯತು ನೀಲಾಂಬಿಕಾ ತಾಯಿ ನಿನಗೆ ವಂದಿಪೆ
ಜಯತು ಜಯತು ಶರಣ ಮಾತೆ ಎಮ್ಮ ನೀನು ರಕ್ಷಿಸು ॥ಪ॥

ಶ್ರೀಗುರು ಬಸವಣ್ಣನ ಮಡದಿಯಾಗಿ ಬಂದೆಯಾ
ಶರಣರೆಲ್ಲರ ಸಲಹಿದ ಮಾತೆಯಾಗಿ ನಿಂದೆಯಾ
ನೆರೆದ ಜಂಗಮರೆಲ್ಲರಿಗೆ ಮಮತೆಯ ತಾಯಿಯಾಗಿ
ಚೊಕ್ಕ ಮನದಿ ಸೇವೆಗೈದೆ ಪರಮ ದಾಸೋಹಿಯಾಗಿ ॥1॥

ಪತಿಗೆ ನೀನು ಮಾತೆಯಾದೆ ಪತಿಯಲ್ಲೇ ಪಿತನ ಕಂಡೆ
ಬಸವ ಗುರುವಿನ ವಿಚಾರ ಪತ್ನಿ ಎಂಬ ಬಿರುದು ಪಡೆದೆ
ಲಿಂಗ ಸಂಗಿ ಮಂಗಳಾಗಿ ಚನ್ನಬಸವ ಮಾತೆಯೆ
ಅಕ್ಕಮಹಾದೇವಿಯ ಅಕ್ಕರೆಯ ತಾಯಿಯೆ ॥2॥

ಬಸವ ಗುರುವಿನೈಕ್ಯವಂ ತಿಳಿದೂ ನೀನು ಎದೆಗೆಡದೆ
ಕರದ ಇಷ್ಟಲಿಂಗದಲ್ಲೇ ಬಸವ ದರ್ಶನ ಪಡೆದೆಯಾ
ಕುಂಡಲಿನಿ ಯೋಗದಲ್ಲಿ ಪರಮ ಸಿದ್ಧಿ ಪಡೆದ ನೀನು
ಇಚ್ಛಾ ಮರಣಿಯಾಗಿ ಲಿಂಗದೇವನಲ್ಲಿ ಬೆರೆದೆಯಾ ॥3॥

ಮಹಾಮನೆಯ ಹೊಂಬೆಳಕೆ ಅನುಭಾವದ ತವ ನಿಧಿಯೆ
ಅನುಭವ ಮಂಟಪದ ಆತ್ಮಜ್ಞಾನ ಶುಭ ಸುಧೆಯೆ
ಮಾತೆ ನಿನ್ನ ಬದುಕು ಧನ್ಯ, ನಿನ್ನ ಪಡೆದ ನಾವು ಧನ್ಯ
ಸಚ್ಚಿದಾನಂದ ಸುತ ನಿನ್ನ ನುಡಿ ನಮಗೆ ಮಾನ್ಯ ॥4॥

5. ಅಕ್ಕನಾಗಲಾಂಬಿಕಾ ತಾಯಿಯೆ

ಜಯತು ಜಯತು ಅಕ್ಕನಾಗಲಾಂಬಿಕಾ ತಾಯಿಯೆ
ಜಯತು ಜಯತು ಚನ್ನಬಸವ ಗುರುವಿನ ಜನನಿಯೆ ॥ಪ॥

ಮಾದರಸ ಮಾದಲಾಂಬಿಕಾ ಪುತ್ರಿಯಾಗಿ ಜನಿಸಿದೆ
ಸಂಗಮದ ಶಿವಸ್ವಾಮಿಯ ಪತ್ನಿಯಾಗಿ ನಿಂದೆಯಾ
ಕ್ರಾಂತಿಪುರುಷ ಬಸವಣ್ಣನ ಸೋದರಿಯಾಗಿ ಸಲಹಿದೆ
ಜ್ಞಾನಿ ಚನ್ನಬಸವಣ್ಣಗೆ ಜನ್ಮವಿತ್ತು ಪೊರೆದೆಯಾ ॥1॥

ಬಸವ ತಂದೆಯ ಸಾಧನೆಗೆ ಸ್ಫೂರ್ತಿಯಾಗಿ ನಿಂದೆಯಾ
ಕ್ರಾಂತಿಗಂಗೋತ್ರಿ ಎಂಬ ಶ್ರೇಷ್ಠ ಬಿರುದ ಪಡೆದೆಯಾ
ಮಹಾಮನೆಯ ತಾಯಿಯಾಗಿ ಹೊಣೆಯನ್ನು ಹೊತ್ತೆಯಾ
ನೆರೆದ ಶರಣ ಸಂದೋಹದ ಅನ್ನಪೂರ್ಣೆಯಾದೆಯಾ ॥2॥

ಶ್ರೇಷ್ಠ ಮಾತೆಯಾಗಿ ಚನ್ನಬಸವಣ್ಣನ ಬೆಳೆಸಿದೆ
ತ್ಯಾಗ - ಯೋಗ - ವಿರಾಗಗಳ ಸಂಗಮವಾಗಿ ಮಾಡಿದೆ
ಅಶ್ವವೇರಿ ಸಂಚರಿಸಿ ಧರ್ಮಜಾಗೃತಿ ಗೈದೆಯಾ
ಚನ್ನಬಸವಣ್ಣನೊಡಗೂಡಿ ಬಸವ ಧರ್ಮ ಬೆಳೆಸಿದೆ ॥3॥

ವಚನಶಾಸ್ತ್ರ ನಿಧಿಗೆ ನಾಶಭಯವು ತಾನು ಎರಗಲು
ಖಡ್ಗ ಹಿಡಿದು ಶತ್ರುಗಳ ಹಿಂಜರಿಸಿದ ಧೀರಮಾತೆ
ಉಳವಿಯಲಿ ವಚನನಿಧಿಯ ಕಾಪಿಟ್ಟ ವೀರಮಾತೆ
ತರೀಕೆರೆಯ ಸನಿಹದಿ ಸಚ್ಚಿದಾನಂದನೊಳ್ ಬೆರೆದ. ॥4॥

6. ಮಾಚಿದೇವ ಮಂಗಲ

ಜಯತು ಜಯತು ಮಾಚಿದೇವ ಧೀರಯೋಗಿ ಪಾಹಿಮಾಂ
ಜಯತು ಜಯತು ಗಣವೀರ ಮಾಚಿತಂದೆ ರಕ್ಷಮಾಂ ॥ಪಲ್ಲವಿ॥

ದೇವರ ಹಿಪ್ಪರಗಿಯಲ್ಲಿ ಜನಿಸಿ ನೀನು ಬಂದೆಯಾ
ದೇವಗುರು ಬಸವಣ್ಣನ ಪಥಕೆ ಒಲಿದು ನಿಂದೆಯಾ
ಅನುಭವ ಮಂಟಪದ ಸ್ತಂಭವಾಗಿ ಮೆರೆದೆಯಾ
ಅನುಭಾವದ ನುಡಿಗಳನು ಭಾವತುಂಬಿ ಉಲಿದೆಯಾ ॥1॥

ಗುರು ಬಸವ ತಂದೆಯ ಕಾರುಣ್ಯವಗಳಿಸುತ
ಬಸವ ತಂದೆ ನಿನ್ನ ಪ್ರಾಣವೆಂದು ತಿಳಿದು ನಡೆದೆಯಾ
ಬಸವ ಧರ್ಮ ರಕ್ಷಣೆಗೆ ತನುಮನಗಳ ಅರ್ಪಿಸಿ
ತ್ಯಾಗ - ಯೋಗ - ವಿರಾಗಗಳ ಸಂಗಮವಾಗಿ ಮೆರೆದೆಯಾ ॥2॥

ಜಾತಿವಾದಿ ಜನರು ವಚನ ನಾಶಗೈಯಲೆಳಸಲು
ಛಾತಿಯಿಂದ ಖಡ್ಗ ಎಡಿದು ಅರಿಗಳನ್ನು ಮರ್ದಿಸಿದೆ.
ವಚನ ನಿಧಿಯ ಉಳಿಸಿಕೊಟ್ಟ ಧೀರ ಶರಣ ನೀನಾದೆ
ಲಿಂಗಾಯತ ಧರ್ಮ ಜ್ಯೋತಿ ವೀರ ಮಾಚಿ ತಂದೆಯೆ ॥3॥

ಉಳಿವೆ ಬನಕ್ಕೆ ಸಾಹಿತ್ಯವ ತಂದು ಸಂರಕ್ಷಿಸಿ
ಅಳಿವ ಕಾರುವಿದನು ಗೊಡಚಿ ಕ್ಷೇತ್ರದಲ್ಲಿ ಬಿಟ್ಟೆಯಾ
ಧೀರ ಶರಣ ವೀರ ಗುರು ಮಾಚಿತಂದೆ ವಂದಿಪೆ
ನಿನ್ನ ಧೀರ ನಡೆ ನಮಗೆ ಎಂದೆಂದೂ ಸ್ಫೂರ್ತಿಸೆಲೆ ॥4॥

- ಮಾತಾಜಿ

2003ರ ಶರಣ ಮೇಳದಲ್ಲಿ ಬಿಡುಗಡೆಯಾಗಲಿರುವ ಅತ್ಯಮೂಲ್ಯ ಧ್ವನಿ ಸುರುಳಿಗಳು

1. ಬಸವ ವಾಣಿ : ಧರ್ಮಪಿತ ಬಸವಣ್ಣನವರ ವಚನಗಳು.
2. ಅಕ್ಕನ ಆತ್ಮಗೀತೆ : ಅಕ್ಕಮಹಾದೇವಿಯ ವಚನಗಳು.
3. ಅಲ್ಲಮಪ್ರಭುವಿನ ಅಮೃತ ವಾಣಿ : ಅಲ್ಲಮಪ್ರಭುವಿನ ವಚನಗಳು.
4. ಎಲ್ಲರಿಗೆ ಚೆಲ್ಲಾದ ಕಲ್ಯಾಣ ಬಸವಯ್ಯ : ಜನಪದರು ಕಂಡಂತೆ ಬರೆದಿರುವ ಬಸವಣ್ಣನವರ, ಕಲ್ಯಾಣ ಕ್ರಾಂತಿಯ ಕಥೆಯನ್ನು ಸುಶ್ರಾವ್ಯವಾಗಿ ವಿವಿಧ ಗಾಯಕ-ಗಾಯಕಿಯರು ಹಾಡಿದ್ದಾರೆ.
5. ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ: ವೀರ ವಿರಾಗಿಣಿ ಅಕ್ಕಮಹಾದೇವಿಯು ಕೇವಲ ವಚನಗಳನ್ನು ಮಾತ್ರವಲ್ಲದೆ ಭಾವಗೀತೆಗಳನ್ನು, ಕೊರವಂಜಿ ಹಾಡು ಮುಂತಾಗಿ ಬರೆದಿದ್ದಾಳೆ. ಯೋಗ ಸಾಧನೆಯ ಮಹತ್ವವನ್ನು ತಿಳಿಸುವ ಯೋಗಾಂಗ ತ್ರಿವಿಧಿಯನ್ನು ಧ್ವನಿ ಸುರುಳಿಗೆ ಅಳವಡಿಸಲಾಗಿದೆ.
6. ಶರಣರಿಗೆ ಶರಣಾರ್ಥಿ: ಧರ್ಮಪಿತ ಬಸವಣ್ಣನವರ ಒಡನಾಡಿಗಳಾಗಿ ಬಾಳಿಬದುಕಿದ 200 ಜನ ಶರಣರಿಗೆ ಶರಣಾರ್ಥಿ ಸಲ್ಲಿಸುವ ಸುಂದರ ಸುರುಳಿ. ಇದರಲ್ಲಿ ಕೆಲವು ಮುಖ್ಯ ಶರಣರನ್ನು ಕುರಿತ ಮಂಗಲಾರತಿ ಗೀತೆಗಳಿವೆ.
7. ಪ್ರಣವ-ಪಂಚಾಕ್ಷರಿ : ಪೂಜೆ-ಧ್ಯಾನ ಮಾಡುವಾಗ ಹಾಕಿಕೊಳ್ಳಲು ಅನುಕೂಲವಾಗುವಂತಹ ಮಂತ್ರ ಧ್ವನಿಯ ಸುರುಳಿ.
8. ಬಸವ-ಲಿಂಗರ ಸ್ತುತಿ : ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವವಣ್ಣನವರ 108 ಸ್ತೋತ್ರಗಳನ್ನು ಒಳಗೊಂಡ ಧ್ವನಿ ಸುರುಳಿ.
9. ಲಿಂಗದೇವನ ಸ್ತುತಿ : ಸೃಷ್ಟಿಕರ್ತ ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ಅರ್ಚಿಸುವಾಗ ಹೇಳುವ 108 ಮಂತ್ರಗಳಲ್ಲದೆ, ವಿಶೇಷ ಗೀತೆಗಳಿಂದ ಕೂಡಿದ ಧ್ವನಿ ಸುರುಳಿ.
10. ಗಣಧ್ವನಿ (ವಚನ ಭಜನೆ)
11. ವಚನ ಮೌಕ್ತಿಕ : ಭಜನೆಗಳ ರೂಪದಲ್ಲಿ ವಚನಗಳು ಬೇಕೆಂಬ ಬೇಡಿಕೆ ಬಹಳ ದಿವಸಗಳಿಂದಲೂ ಇದ್ದು ಪೂರೈಸಲಾಗಿರಲಿಲ್ಲ. ಈ ಸಲ ಗಣಧ್ವನಿ ಮತ್ತು ವಚನ ಮೌಕ್ತಿಕ ಎಂಬ ಎರಡು ಸುರುಳಿಗಳ ಮೂಲಕ ಭಜನೆಗಳ ರೂಪದಲ್ಲಿ ವಚನಗಳನ್ನು ಕೊಡಲಾಗಿದೆ.
12. ಶರಣ ಗೀತಾಂಜಲಿ ಮತ್ತು 13. ಶರಣ ಸಂದೇಶ : ಆದಿ ಶರಣರು ಬರೆದಿರುವ ಕೆಲವು ಗೀತೆಗಳನ್ನು ಗಾಯಕ - ಗಾಯಕಿಯರು ಹಾಡಿ, ಮುದಗೊಳಿಸುತ್ತಾರೆ.

ಈ ಎಲ್ಲವೂ 60 ನಿಮಿಷದ ಧ್ವನಿ ಸುರುಳಿಗಳು. ಬೆಲೆ : 35 ರೂ. ಹದಿಮೂರನ್ನೂ ಬಿಡಿಬಿಡಿಯಾಗಿ ತೆಗೆದುಕೊಂಡಾಗ 455 ರೂ. ಬೆಲೆಯಾಗುತ್ತದೆ. ಒಟ್ಟಿಗೆ ತೆಗೆದುಕೊಳ್ಳುವವರಿಗೆ 410 ರೂ. ಗೆ ಪೂರ್ಣ ಸೆಟ್ ಕೊಡಲಾಗುವುದು.

ಗಣಮೇಳಕ್ಕೆ ಕರೆ

ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವೆಲ್ಲವ
ಕೋಳಿಯೊಂದು ಕುಟುಕ ಕಂಡಡೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಆ ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ

ಎಂದು ಧರ್ಮಪಿತರು ಹೇಳುವಂತೆ ಭಕ್ತಿಪಕ್ಷದ ಸದಸ್ಯರಾಗಬೇಕಾದುದು ಎಲ್ಲ ಬಸವ ಭಕ್ತರ ಆದ್ಯ ಕರ್ತವ್ಯ.

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡುಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವನರಿವೊಡೆ ಗುರುಪಥವೆ ಮೊದಲು ;
ನಮ್ಮ ಲಿಂಗದೇವರನರಿವೊಡೆ ಶರಣರ ಸಂಗವೇ ಮೊದಲು ಮೊದಲು !

ಆದ್ದರಿಂದ ಗಣ ಸಮಾವೇಶಗಳಲ್ಲಿ ಭಾಗವಹಿಸುವುದು ಅತ್ಯಂತ ಅವಶ್ಯಕ. ನೆನಹು-ಪ್ರತಿನಿತ್ಯ ಸಂಜೆ 7 ಗಂಟೆಗೆ ಮಾಡುವ ಸಂಕ್ಷಿಪ್ತ ಪ್ರಾರ್ಥನೆ, ಶರಣ ಸಂಗಮ-ವಾರದ ಸಾಮೂಹಿಕ ಪ್ರಾರ್ಥನೆ, ಗಣ ಮೇಳ-ಶಿವರಾತ್ರಿಯಂದು ಮಾಡುವ ಸಮುದಾಯ ಪ್ರಾರ್ಥನಾ ಸಭೆ, ಶರಣ ಮೇಳ-ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಜನವರಿ 11 ರಿಂದ 15ರ ವರೆಗೆ ನಡೆಯುವ ಶರಣ ಯಾತ್ರೆ; ಇದಲ್ಲದೆ ಶರಣ ಬಂಧುಗಳು ತಮ್ಮ ಮನೆಯ ಸುಖದ ಸಮಾರಂಭಗಳಾದ ವಿವಾಹ, ನಾಮಕರಣ, ಗೃಹ ಪ್ರವೇಶ ಮುಂತಾದವು. ಧಾರ್ಮಿಕ ವಿಧಿಗಳಾದ ವಿಭೂತಿ ವೀಳ್ಯ, ಲಿಂಗೈಕ್ಯ ಸಂಸ್ಕಾರ, ಲಿಂಗೈಕ್ಯರ ಸಂಸ್ಮರಣೆ ಮುಂತಾದವುಗಳನ್ನು ನಡೆಸುವ ಸಮಯದಲ್ಲಿ ಮಾಡುವ ಗಣ ಸಮಾವೇಶವಾದ ಶರಣ ಸಮಾಗಮ ಇವೆಲ್ಲವೂ ಶರಣ ಬಂಧುಗಳನ್ನು ಪರಸ್ಪರ ಒಂದು ಕಡೆ ಬೆರೆಯುವಂತೆ, ಬೆಸೆಯುವಂತೆ ಮಾಡುವ ಅಪೂರ್ವ ಕಾರ್ಯಕ್ರಮಗಳು. ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆದ ಏಳನೆಯ ಶರಣ ಮೇಳದ ಸಮಾರೋಪ ಸಮಾರಂಭದಲ್ಲಿ ದಿ.15-1-1994 ರಂದು ಶರಣರ ಮಹಾಸಭೆಯು ಒಂದು ಚಾರಿತ್ರಿಕ ನಿರ್ಣಯವನ್ನು ತೆಗೆದುಕೊಂಡಿದೆ. ಅದೆಂದರೆ ಪ್ರತಿ ವರ್ಷವೂ ಮಹಾಶಿವರಾತ್ರಿಯಂದು ಎಲ್ಲ ಗ್ರಾಮ, ಊರು, ಜಿಲ್ಲಾ ಕೇಂದ್ರ, ನಗರಗಳಲ್ಲಿ "ಶರಣ ಗಣ ಮೇಳ" ಎಂಬ ಸಮಾವೇಶವನ್ನು ನಡೆಸಿ ಸೃಷ್ಟಿಕರ್ತ ಲಿಂಗದೇವನನ್ನು-ಧರ್ಮಗುರು ಬಸವಣ್ಣನವರನ್ನು ಕೊಂಡಾಡಬೇಕೆಂಬುದು. ಈ ಗಣಮೇಳವನ್ನು ನೀವು ನಡೆಸಬೇಕೆಂಬ ದಿವ್ಯ ಆದೇಶವನ್ನು ಬಸವ ಧರ್ಮದ ಮಹಾಜಗದ್ಗುರು ಪೀಠವು ಕಳಿಸಿಕೊಟ್ಟಿದೆ. ಈ ದಿವ್ಯ ಆದೇಶ ಪಾಲನೆ ನಿಮ್ಮ ಪವಿತ್ರ ಕರ್ತವ್ಯ ಎಂದೇ ಭಾವಿಸಿದ್ದೇವೆ.

ಶಿವರಾತ್ರಿಯು ಶರಣ(ಶನಿ)ವಾರ ದಿ. 1-3-2003 ರಂದು ಒದಗಿ ಬಂದಿದ್ದು ಅಂದು ಗಣಮೇಳವನ್ನು ತಾವು ನಡೆಸಬೇಕು. ಊರಿನ ಮಧ್ಯದಲ್ಲಿರುವ ಒಂದು ವಿಶಾಲವಾದ ಮೈದಾನದಲ್ಲಿ ಅಥವಾ ವಿಶಾಲವಾದ ಸಭಾ ಭವನದಲ್ಲಿ ಪ್ರಾರ್ಥನೆಯನ್ನು ನಡೆಸಬೇಕು.

ಗಣ್ಯರಿಂದ ಧ್ವಜಾರೋಹಣ, ಬಸವ ಭಾವಚಿತ್ರ ಪೂಜೆ ಮಾಡಬೇಕು. ಅಂದು ಯಾವುದೇ ವ್ಯಕ್ತಿಗೆ ಅವರು ಎಷ್ಟೇ ದೊಡ್ಡವರಿರಲಿ ಅವರಿಗೆ ಮಾಲಾರ್ಪಣೆ ಮಾಡದೆ ಅವರಿಂದ ಧರ್ಮಪಿತರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿಸಬೇಕು. ಬಸವ ಧರ್ಮಪೀಠದಿಂದ ಕಳಿಸಿಕೊಡುವ (ಕಲ್ಯಾಣ ಕಿರಣ ಮಾಸ ಪತ್ರಿಕೆಯಲ್ಲಿ ಮುದ್ರಿಸಲಾಗುವ) ಸಂದೇಶವನ್ನು ಓದಬೇಕು. ಶ್ರದ್ಧಾ-ಭಕ್ತಿಯಿಂದ ಉಪನ್ಯಾಸ ಮಾಡುವವರಿದ್ದರೆ ಮಾಡಿಸಬೇಕು. ಧಾರ್ಮಿಕ ಶ್ರದ್ಧೆಯೇ ಇರದ ಉಪನ್ಯಾಸಕರಿಂದ ಗೊಂದಲಪೂರ್ಣ ಭಾಷಣಗಳನ್ನು ಮಾಡಿಸಲು ಹೋಗಬಾರದು. ಬೆಳಿಗ್ಗೆ ಮಾಡುವ ಸಮುದಾಯ ಪ್ರಾರ್ಥನೆ-ಶರಣ ಸಂಗಮ ಕಡ್ಡಾಯ ವಿಧಿ. ಸಾಮೂಹಿಕ ಇಷ್ಟಲಿಂಗಾರ್ಚನೆ, ಜಾಗರಣೆ ಮುಂತಾದುವನ್ನು ಅವರವರ ಅನುಕೂಲತೆಗೆ ತಕ್ಕಂತೆ ಇಟ್ಟುಕೊಳ್ಳಬಹುದು.

"ಕಲ್ಯಾಣ ಕಿರಣ" ಮಾಸ ಪತ್ರಿಕೆ

ಬಸವ ಧರ್ಮ ಪೀಠ, ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಳ ಚಟುವಟಿಕೆ, ಕಾರ್ಯಕ್ರಮ ವಿವರ ಮುಂತಾದುವನ್ನು ತಿಳಿಯಲು, ತಾತ್ವಿಕವಾಗಿ ಮಾಹಿತಿ ಪಡೆಯಲು ಬಸವ ತತ್ವಾನುಯಾಯಿಗಳು ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ತಪ್ಪದೇ ಓದುವುದು ಅತ್ಯಗತ್ಯ. ಕೆಲವೊಂದು ವಿಷಯಗಳನ್ನು ಬೇರೆ ಪತ್ರಿಕೆಗಳ ಮೂಲಕ ಕೊಡುವುದು ತಿಳಿಸುವುದು ಸಾಧ್ಯವಾಗದು. ಅವರು ಹಾಕುವುದೂ ಇಲ್ಲ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು ಕಡ್ಡಾಯವಾಗಿ ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ವೈಯಕ್ತಿಕವಾಗಿ ಮತ್ತು ಪ್ರಾರ್ಥನಾ ಸಭೆಗಳಲ್ಲಿ ಓದುವುದು ಅತ್ಯಗತ್ಯವಾಗಿರುತ್ತದೆ. ಕೆಲವು ಪತ್ರಿಕೆಗಳು ಪೂರ್ವಾಗ್ರಹ ಪೀಡಿತವಾಗಿ ಉತ್ಪ್ರೇಕ್ಷಿತ ವರದಿಗಳನ್ನು, ಸುಳ್ಳು ವಿವರಗಳನ್ನೂ ಕೊಡುತ್ತಿರುತ್ತವೆ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು 500 ರೂ. ಕಟ್ಟಿ ಆಜೀವ ಸದಸ್ಯರು ಅಥವಾ 50 ರೂ. ಕಟ್ಟಿ ವಾರ್ಷಿಕ ಚಂದಾದಾರರಾಗುವುದು ಅವಶ್ಯವಿರುತ್ತದೆ.

ವಿಳಾಸ : ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, 2035, 20ನೆಯ ಮೇನ್,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ತಮಿಳುನಾಡು, ಆಂಧ್ರ, ಮಹಾರಾಷ್ಟ್ರದಲ್ಲಿರುವ ರಾಷ್ಟ್ರೀಯ ಬಸವ ದಳಗಳವರು ಕನ್ನಡ ಬಲ್ಲ ಯಾರಾದರೂ ಒಬ್ಬರನ್ನು ಆಹ್ವಾನಿಸಿ ಕಲ್ಯಾಣ ಕಿರಣವನ್ನು ಪೂರ್ಣವಾಗಿ ಓದಿ, ತಿಳಿಯುವ ಪರಿಪಾಠ ಇರಿಸಿಕೊಳ್ಳಬೇಕು.

ಶರಣ ಮೇಳ ರಸೀತಿ ಪುಸ್ತಕ ವಾಪಸ್ಸು

2003 ನೆಯ ಜನವರಿಯಲ್ಲಿ ನಡೆದ 16ನೆಯ ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲು ರಸೀತಿ ಪುಸ್ತಕಗಳನ್ನು ಕಳಿಸಲಾಗಿತ್ತು. ಕೆಲವರು ಶರಣ ಮೇಳದ ಸಮಯದಲ್ಲಿ ತಂದು ಕೊಟ್ಟಿದ್ದಾರೆ ಮತ್ತೆ ಕೆಲವರು ಕೊಡುತ್ತಿದ್ದಾರೆ. ಆದರೆ ಎಲ್ಲರೂ ಫೆಬ್ರವರಿ ಕೊನೆಯೊಳಗೆ ರಸೀದಿ ಪುಸ್ತಕವನ್ನು ತಲುಪಿಸಲೇಬೇಕೆಂದು ಕೋರುತ್ತೇವೆ. ಸಂಗ್ರಹ ಮಾಡಿದ ಹಣಕ್ಕೆ ಡಿ.ಡಿ.ತೆಗೆಸಿ

ಕಳಿಸಬೇಕು. ಒಂದು ವೇಳೆ ಏನೂ ಸಂಗ್ರಹ ಮಾಡಿರದಿದ್ದರೆ ರಸೀತಿ ಪುಸ್ತಕಗಳನ್ನು ವಾಪಸ್ಸು ಕಳಿಸಬೇಕು. ಬೆಂಗಳೂರು ವಿಳಾಸಕ್ಕೇ ಕಳಿಸಬೇಕೆಂದು ಕೋರುತ್ತೇವೆ. ಶರಣ ಮೇಳ ಉತ್ಸವ ಸಮಿತಿಯು ನೋಂದಾಯಿತ ಟ್ರಸ್ಟ್ ಇರುವುದರಿಂದ ನಾವು ಸರಿಯಾಗಿ ಲೆಕ್ಕವಿಡಬೇಕಾದುದು ಕರ್ತವ್ಯವಾಗಿದೆ. ಆದ್ದರಿಂದ ಸಹಕರಿಸಿರಿ.

ಸದ್ಯದಲ್ಲಿ ಬರುವ ಹಬ್ಬ -ಹುಣ್ಣಿಮೆಗಳು.

೧. ಚನ್ನಹುಣ್ಣಿಮೆ - ಮಾಘ ಪೌರ್ಣಿಮೆ. ಅಂದು ಶರಣ ಗಣ ಸಮಾವೇಶ ಮಾಡಿ ಬೆಳುದಿಂಗಳ ಊಟವನ್ನು ಸಾಮೂಹಿಕ ಪ್ರಾರ್ಥನಾ ನಂತರ ಮಾಡುವುದು. ದಿ.8-2-2001

2. ದಿ. 1-3-2003 ಶರಣ(ಶನಿ)ವಾರ ಮಹಾಶಿವರಾತ್ರಿಯಂದು ಗಣಮೇಳ.

೨. ಹೋಳಿ ಹುಣ್ಣಿಮೆಯು ದಿ. 18-3-2003 ರಂದು ಬಂದಿದ್ದು, ಅದರ ಹಿಂದಿನ ದಿನಗಳಲ್ಲಿ ಕ್ರಿ.ಶ. 1196 ರಲ್ಲಿ ಕಲ್ಯಾಣ ಕ್ರಾಂತಿ ಸಂಭವಿಸಿದುದು, ಹೋಳಿ ಹುಣ್ಣಿಮೆಯಂದು ಇನ್ನಿತರ ಜನರು ಅತ್ಯಂತ ಕೆಳಮಟ್ಟದ ಆಚರಣೆ ಮಾಡುವ ಕಾರಣ ಬಸವಾಯತರು ತಮ್ಮ ತಮ್ಮ ಮನೆಗಳಲ್ಲೇ 808ನೆಯ ಕಲ್ಯಾಣ ಕ್ರಾಂತಿ ಸಂಸ್ಮರಣಾ ಕಾರ್ಯಕ್ರಮವನ್ನು ಆಚರಿಸಬೇಕು.

ಫಾಲ್ಗುಣ ದ್ವಾದಶಿಯಂದು	ದಿ. 15-3-2003	ಧರ್ಮಪಿತರ ಬಸವಣ್ಣನವರ ಗಡಿಪಾರು
ತ್ರಯೋದಶಿಯಂದು	ದಿ. 16-3-2003	ಹರಳಯ್ಯ-ಮಧುವರಸ-ಶೀಲವಂತರ ಬಂಧನ
ಚತುರ್ದಶಿಯಂದು	ದಿ. 17-3-2003	ಶರಣರ ವಧೆ ಎಳೆಹೂಟೆ
ಹೋಳಿ ಹುಣ್ಣಿಮೆಯಂದು	ದಿ. 18-3-2003	ಬಿಜ್ಜಳನ ವಧೆ
ಪಾಡ್ಯದಂದು	ದಿ. 19-3-2003	ಚನ್ನಬಸವಣ್ಣನವರ ಕಲ್ಯಾಣ ನಿರ್ಗಮನ
ದ್ವಿತಿಯಾದಂದು	ದಿ. 20-3-2003	ಕಲ್ಯಾಣ ಕ್ರಾಂತಿ ಸಂಸ್ಮರಣಾ ದಿನ

ಈ ಆರೂ ದಿವಸಗಳು ಬಸವ ಧರ್ಮದ ಇತಿಹಾಸದಲ್ಲಿ ಕರಾಳ ದಿನಗಳು. ಆದ್ದರಿಂದ ಶರಣ ಬಂಧುಗಳು ಆರು ದಿವಸಗಳ ಕಾಲ ತಮ್ಮ ತಮ್ಮ ಮನೆಗಳಲ್ಲಿ ಕಲ್ಯಾಣ ಕ್ರಾಂತಿಯ ಪುಸ್ತಕವನ್ನು ಸಂಜೆಯ ವೇಳೆ ಪಾರಾಯಣ ಮಾಡಬೇಕು. ಕಲ್ಯಾಣ ಕ್ರಾಂತಿ ಪುಸ್ತಕ 142 ಪುಟಗಳಿಂದ ಕೂಡಿದ್ದು ಆರು ದಿನಗಳಿಗೆ ವಿಂಗಡಿಸಿಕೊಳ್ಳಬೇಕು. ಪ್ರತಿದಿನ ಸಂಜೆ 7 ಗಂಟೆಗೆ ಧರ್ಮಪಿತರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ನೆನಹು ಮಾಡಿ, ಕಲ್ಯಾಣ ಕ್ರಾಂತಿಯ 24 ಪುಟಗಳನ್ನು ಪಠಣ ಮಾಡಬೇಕು. ಇನ್ನಿತರರು ಕುಳಿತು ಕೇಳಬೇಕು. ಫಾಲ್ಗುಣ ಮಾಸದ ಬಹುಳ ದ್ವಿತೀಯ ದಿ. 20-3-2003 ರಂದು ಮಹಾಮಂಗಲದೊಡನೆ ಪಠಣವನ್ನು ಮುಕ್ತಾಯ ಮಾಡಬೇಕು. ನಾನು ಬರೆದಿರುವ ಕಲ್ಯಾಣ ಕ್ರಾಂತಿ ಪುಸ್ತಕವು ಮರಾಠಿ ಭಾಷೆಯಲ್ಲೂ ತರ್ಜುಮೆಗೊಂಡಿದೆ. ಮರಾಠಿ ಮಾತೃಭಾಷೆಯವರು ಅದನ್ನೇ ಪಠಣ ಮಾಡಬೇಕು. ಈ ಎಲ್ಲ ಧಾರ್ಮಿಕ ಆದೇಶಗಳನ್ನು ಶ್ರದ್ಧಾ-ಭಕ್ತಿಯಿಂದ ಪಾಲಿಸಬೇಕೆಂದು ಹೃತ್ಪೂರ್ವಕವಾಗಿ ಸೂಚಿಸುತ್ತೇವೆ.

ಶುಭಹಾರೈಕೆಗಳೊಡನೆ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಗಣಮೇಳದಲ್ಲಿ ಸಂದೇಶ ವಾಚನ

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ ಆಹ್ವಾನಿತ ಅತಿಥಿಗಳಿಂದ)

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಈ ಪವಿತ್ರ ಶರಣ 'ಗಣಮೇಳ' ದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣಮೇಳ'ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯೊಳು ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಕರಾದರು. ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ' ಎಂದರೇನು? ಗಣ ಎಂದರೆ ಸಮೂಹ, ಸಮಾಜ, ಧರ್ಮಪಿತ ಬಸವಣ್ಣನವರು 'ಗಣಧರ್ಮ' ಒಂದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ಕಾಣುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು ; ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸಿದಡೆ ನಿಮ್ಮಾಳಲ್ಲ

ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು, ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣಮೇಳಾಪ' ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ.

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮ ಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ
ಜಗತ್ ಕರ್ತನಿಗೆ ಶರಣಾಗಿದ್ದೇನೆ
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ಸೇರಿದ್ದೇವೆ

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage)ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗಾಯತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ ಇವರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈ ವರೆಗೆ ಆಗಿ ಹೋಗಿರುವ ಶಿವಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ - ಲಿಂಗೈಕ್ಯ ದಿನ ಆಚರಿಸಲು ವರ್ಷದ ೩೬೫ ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟಮೊದಲ ಯೋಗಿಯೂ, ಭಾರತೀಯ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವ ಪ್ರವಾದಿ 'ಯೋಗಿಶಿವ'ನ ತಪಸ್ಸಿನ ದಿನವಾದ 'ಶಿವರಾತ್ರಿಯಂದು' ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸಾರವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. ೧೧೩೪ ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ-ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿಪದ್ಧತಿ ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ,

ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು ಬೆಳೆಸಿದ ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನಿಂದ ದಿವ್ಯ ಆದೇಶವನ್ನು ಪಡೆದರು. ಸಾಕ್ಷಾತ್ಕಾರದ ಅನುಭವವಾಗಿ ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ-ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು. ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ, ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು. ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟಿನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು. ಅವರ ನಿರ್ಗಮನದ ನಂತರ ಕಲ್ಯಾಣದಲ್ಲಿ ಕ್ರಾಂತಿಯಾಗಿ ಶರಣರ ವಧೆಯಾಯಿತು. ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದ ಬಸವಣ್ಣನವರು ನಳನಾಮಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ ಕ್ರಿ.ಶ.೧೧೯೬ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಬಸವಾದಿ ಪ್ರಮಥರು ವಿಶೇಷ ಪಥವನ್ನು ತೋರಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳು ಷಡಾಚಾರಗಳು

೧. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಕಳಿಸಿದ ಪ್ರತಿನಿಧಿ, ದೇವರ ಕರುಣೆಯ ಕಂದ (ಬಸವಾಚಾರ)
೨. ದೇವನು ಒಬ್ಬ (ಲಿಂಗಾಚಾರ)
೩. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)
೪. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
೫. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
೬. ವ್ಯಕ್ತಿಗಿಂತಲೂ ಸಮಾಜ-ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟಸ್ಥಲ - ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ - ಪರಮಾತ್ಮನಲ್ಲಿ ಒಡವೆರೆದು ಒಂದಾಗುವುದು, ಜೀವನು ಪರಶಿವನೊಡನೆ ಒಂದಾಗಬೇಕಾದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರುಸ್ಥಲ (stages)ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ-ಅರ್ಪಣೆ-ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು! ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು-ಲಿಂಗ- ಜಂಗಮ-ವಿಭೂತಿ-ರುದ್ರಾಕ್ಷಿ-ಮಂತ್ರ, ಪಾದೋದಕ-ಪ್ರಸಾದ ಅಳವಡಿಸಿಕೊಳ್ಳುವುದು.

ಸಪ್ತನೀತಿ ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟುಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿ ಕೊಂಡಿದ್ದಾರೆ. ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ಈ ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಲ್ಲ

ವಿಶ್ವಗುರು ಬಸವಣ್ಣನವರು ವಿಶ್ವಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ, ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೇನೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣಮೇಳದ ಇಂದು ತೊಡೋಣ. ★

"ಜಯಗುರು ಬಸವೇಶ ಹರಹರ ಮಹಾದೇವ"

ನೂತನ ಸಾಮಗ್ರಿಗಳು

1. **ಬೆಳ್ಳಿಯ ನಾಣ್ಯಗಳು :** 10 ಗ್ರಾಂ ತೂಕಕ್ಕೂ ಹೆಚ್ಚಿನ ಒಂದು ಬದಿಗೆ ಅಭಯ ಹಸ್ತದ ಬಸವಣ್ಣನವರ ಚಿತ್ರವಿರುವ, ಇನ್ನೊಂದು ಬದಿಗೆ ಲಾಂಛನ ಬಸವ ಲಿಂಗ ಮುದ್ರೆ-ಷಟ್ಕೋನ ಸಹಿತ ಇಷ್ಟಲಿಂಗ ಇರುವ ಬೆಳ್ಳಿಯ ನಾಣ್ಯಗಳು ಸಿದ್ಧವಾಗಿವೆ.ಬೆಲೆ : 140 ರೂ.
2. **ಭಿತ್ತಿ ದಿನದರ್ಶಿ (wall calender) :** ವಿಶ್ವವಿಭೂತಿ ಬಸವಣ್ಣನವರ, ಸುಂದರ ಚಿತ್ರವಿರುವ 2003 ಇಸವಿಯ ಕ್ಯಾಲೆಂಡರ್. ಬೆಲೆ : 16 ರೂ.
3. **ಪಾಕೆಟ್ ಕ್ಯಾಲೆಂಡರ್ (ಬಸವ ಪ್ರಭೆ) :** ಜೇಬಿನಲ್ಲಿ ಇಟ್ಟುಕೊಳ್ಳುವ ಚಿಕ್ಕ ಆಕಾರದ ದಿನದರ್ಶಿ, ಒಳಗೆ ಶರಣ ಧರ್ಮದ ಜಯಂತಿ ಹಬ್ಬ-ಹುಣ್ಣಿಮೆ-ಉತ್ಸವಗಳ ವಿವರಗಳಿವೆ ಬೆಲೆ : 6 ರೂ.
4. **ಜೇಬಿನಲ್ಲಿ ಇಡಬಹುದಾದ ಚಿಕ್ಕ ಕಾರ್ಡ್ :** ವರ್ಷದ ದಿನಾಂಕಗಳು-ಹಬ್ಬ-ಹುಣ್ಣಿಮೆಗಳ ಪಟ್ಟಿಯೊಡನೆ ಲಭ್ಯವಿದೆ. ಬೆಲೆ 1 ರೂ. ಮಾತ್ರ. ದಿನಾಂಕ ಮಾತ್ರ ಪ್ರಕಟಿಸಿ, ಕೆಳಗೆ ಖಾಲಿ ಜಾಗ ಇರುವ ಕಾರ್ಡ್ ಸಹ ಸಿಗುತ್ತವೆ. ಸುಂದರವಾದ ಬಸವಣ್ಣನವರ ಭಾವಚಿತ್ರ ಇನ್ನೊಂದು ಬದಿಗೆ ಇರುತ್ತದೆ. ವಿವಿಧ ಉದ್ಯೋಗಿಗಳು ತಮ್ಮ ವಿಳಾಸವನ್ನು ಖಾಲಿ ಜಾಗದಲ್ಲಿ ಮುದ್ರಿಸಿ ತಮ್ಮ ಉದ್ಯೋಗದ ಪರಿಚಯಪತ್ರವನ್ನಾಗಿ ಅಥವಾ ಬಂಧು ಮಿತ್ರರಿಗೆ ನೆನಪಿನ ಕಾಣಿಕೆಯಾಗಿ ಕೊಡಲು ಈ ಕ್ಯಾಲೆಂಡರ್ ಕಾರ್ಡ್ ತುಂಬಾ ಸುಂದರವಾಗಿವೆ. 100 ಪ್ರತಿ ಕೊಂಡರೆ 90 ರೂ. 200 ರ ಮೇಲೆ ಕೊಂಡರೆ 80 ರೂ.ಗೆ 100 ರಂತೆ ಕೊಡಲಾಗುವುದು.
5. **ಸುಂದರವಾದ ಬಸವಣ್ಣನವರ ಭಾವ ಚಿತ್ರ ಇರುವ ವಿಸಿಟಿಂಗ್ ಕಾರ್ಡ್ :** ನೂರರ ಸಂಖ್ಯೆಯಲ್ಲಿ ಖರೀದಿಸಿ ತಮ್ಮ ತಮ್ಮ ಹೆಸರು-ವಿಳಾಸವನ್ನು ಒಂದು ಬದಿಗೆ, ಇನ್ನೊಂದು ಬದಿಗೆ ಬಸವ ವಚನವೊಂದನ್ನು ಮುದ್ರಿಸಿಕೊಳ್ಳಲು ಉಪಯುಕ್ತ. 100 ಪ್ರತಿಗೆ 100 ರೂ. 200 ರ ಮೇಲೆ 90 ರೂ.ಗೆ 100 ರೂ.ದಂತೆ
6. ಹೊಸ ಧ್ವನಿ ಸುರುಳಿಗಳು ಮತ್ತು ಹೊಸದಾಗಿ ಮುದ್ರಣಗೊಂಡ ಪುಸ್ತಕಗಳು.
7. ಕಿರೀಟ ಧರಿಸಿದ ಪ್ರಧಾನಿ ಪೋಷಾಕಿನ ಬಸವಣ್ಣನವರ ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನ ಒಂದು ಅಡಿ ಎತ್ತರದ ಮೂರ್ತಿಗಳು ಸಿಗುತ್ತವೆ. ಬೆಲೆ : 225 ರೂ.
8. ಬಸವ ಭಾವಚಿತ್ರವಿರುವ ಗೋಡೆ ಗಡಿಯಾರಗಳು ಲಭ್ಯವಿರುತ್ತವೆ. ಬೆಲೆ : 250 ರೂ.
9. ಶ್ರೀ ಗುರು ಬಸವಣ್ಣನವರ ಒಂದು ಅಡಿ ಎತ್ತರದ ಮೂರ್ತಿಗಳು ವಿವಿಧ ಪದಾರ್ಥಗಳಲ್ಲಿ ತಯಾರು ಮಾಡಿದವು ಲಭ್ಯವಿದೆ. ಅವರವರ ಶಕ್ತ್ಯಾನುಸಾರ ಕೊಳ್ಳಬಹುದು.
10. ಗ್ರಾನೈಟ್ ಶಿಲೆಯಲ್ಲಿ ಅಗಲ ಒಂದು ಅಡಿ, ಎತ್ತರ ಒಂದೂವರೆ ಅಡಿ. ಗ್ರಾನೈಟ್ ಶಿಲೆಯಲ್ಲಿ ಅಭಯ ಹಸ್ತದ ಮೂರ್ತಿಯ ಚಿತ್ರವನ್ನು ಕೊರೆಯಲಾಗಿರುವುದು. ಬೆಲೆ: 550-00. ಸ್ಯಾಂಪಲ್ ಶರಣ ಮೇಳದಲ್ಲಿ ನೋಡಲು ಸಿಗುವುದು. ಬೇಕಾದವರು ಆರ್ಡರ್ ಕೊಡಬಹುದು.
11. **ಅಮೃತ ಶಿಲೆಯಲ್ಲಿ ಅಭಯ ಮುದ್ರೆಯ ಮೂರ್ತಿ :** ಒಂದು ಅಡಿ ಎತ್ತರದ್ದು 11500 ರೂ. ಸಾಗಾಣಿಕೆ ವೆಚ್ಚ ಸೇರಿ. ಬಸವ ಐಕ್ಯ ಮಂಟಪದ ಆಕಾರದ ಚಿಕ್ಕಮಂಟಪವನ್ನು (2 ಅಡಿ X 2 ಅಡಿ) ಪೂಜಾ ಗೃಹದಲ್ಲಿ ಮಾಡಿ ಅದರಲ್ಲಿ ಒಂದು ಅಡಿಯ ಮೂರ್ತಿಯನ್ನು ಬಹಳ ಜನ ಶರಣರು ಕೂರಿಸುತ್ತಿದ್ದಾರೆ. ಬಸವ ಮಂಟಪಗಳಲ್ಲಿ ಕೂರಿಸಲು 1 1/2 ಅಡಿ, 2 ಅಡಿ, 2 1/2 ಅಡಿ, 3 ಅಡಿ, 3 1/2 ಅಡಿ. ಹೀಗೆ ವಿವಿಧ ಎತ್ತರದ ಅಭಯ ಮುದ್ರೆಯ ಮೂರ್ತಿಗಳು ದೊರೆಯುತ್ತವೆ. ಆಸಕ್ತರು ಆರ್ಡರ್ ಕೊಟ್ಟರೆ ಮಾಡಿಸಿಕೊಡಲಾಗುವುದು.

ಇನ್ನೂ ಅನೇಕ ವಸ್ತುಗಳು ಹೊಸದಾಗಿ ತಯಾರಾಗಿ, ಶರಣ ಮೇಳದಲ್ಲಿ ಲಭ್ಯವಿರುತ್ತವೆ.

ಪ್ರಕಾಶಕರು : ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೇ ಮೇನ್, 2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010. ದೂರವಾಣಿ: 080-3325335 / 3322790

ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸ, ವಿಳಾಸ ಕಳಿಸಲು ಕೋರಿಕೆ

ಬಸವ ತತ್ತ್ವ ಪ್ರಚಾರದ ಉದ್ದೇಶಕ್ಕಾಗಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರನ್ನು ಅಮೆರಿಕಾದಲ್ಲಿ ಆರಂಭವಾಗಿರುವ ಸಂಸ್ಥೆ Universal Centre of Basava Philosophy ಆಹ್ವಾನಿಸಿದ್ದು, 2003 ನೆಯ ಇಸವಿಯ ಮೇ ತಿಂಗಳಲ್ಲಿ ಪೂಜ್ಯರು ಹೋಗುವ ಸಂಭವವಿದೆ. ಸಾಮಾನ್ಯವಾಗಿ ಆ ದೇಶದಲ್ಲಿ ಮೇ ತಿಂಗಳಿನಿಂದ ಸೆಪ್ಟಂಬರ್‌ವರೆಗೆ ಹವಾಮಾನವು ಅನುಕೂಲಕರವಾಗಿ ಇರುವುದರಿಂದ ಈ ಸಮಯದಲ್ಲಿ ವಿವಿಧ ಸ್ಥಳಗಳಲ್ಲಿ ಕಾರ್ಯಕ್ರಮ ಏರ್ಪಡಿಸಲು UCBP ಸಂಸ್ಥೆಯು ಆಶಿಸಿದೆ.

ಭಾರತದಲ್ಲಿರುವ ಲಿಂಗಾಯತ ಧರ್ಮೀಯರು ಮತ್ತು ಅಧ್ಯಾತ್ಮಿಕ ಆಸಕ್ತರು ಯು.ಎಸ್.ಎ ದಲ್ಲಿರುವ ತಮ್ಮ ತಮ್ಮ ಬಂಧು-ಮಿತ್ರರು, ಪರಿಚಿತರು ಮತ್ತು ಧಾರ್ಮಿಕ ಸಂಸ್ಥೆಗಳ ವಿಳಾಸಗಳನ್ನು ನಮ್ಮ ಬೆಂಗಳೂರಿನ ವಿಳಾಸಕ್ಕೆ ಕಳಿಸಿಕೊಡಬೇಕು ಮತ್ತು ತಮ್ಮ ಬಂಧು-ಮಿತ್ರರು, ಮಕ್ಕಳು, ಸೋದರರು, ಪರಿಚಿತರು, ಪರಿಚಿತ ಧಾರ್ಮಿಕ ಸಂಸ್ಥೆಗಳಿಗೆ ಈ ವಿಷಯವನ್ನು ಪತ್ರ ಮುಖೇನ ತಿಳಿಸಬೇಕು. ಏಕೆಂದರೆ ಪೂಜ್ಯರ ಕಾರ್ಯಕ್ರಮಗಳನ್ನು ಮನೆಗಳಲ್ಲಿ ಮಾತ್ರವಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ, ವಿಶ್ವವಿದ್ಯಾಲಯ ಮುಂತಾದ ಕಡೆಗಳಲ್ಲಿ ಸಂಯೋಜಿಸಲು ಸಂಸ್ಥೆಯು ಬಯಸಿದೆ. ಅಲ್ಲಿರುವ ಆಸಕ್ತರು ಕಾರ್ಯಕ್ರಮಗಳ ವಿವರ ತಿಳಿದರೆ ಸಮೀಪದ ಸ್ಥಳಗಳಿಗೆ ಬಂದು ಪೂಜ್ಯರ ದರ್ಶನ ಪಡೆಯಬಹುದು, ಉಪನ್ಯಾಸಗಳನ್ನು ಕೇಳಬಹುದು. ಬಿಡಿಬಿಡಿಯಾದ ಕುಟುಂಬಗಳಿದ್ದರೆ ಕಾರ್ಯಕ್ರಮವನ್ನು ಏರ್ಪಡಿಸಲು ಆಗದೆ ಇದ್ದರೂ ತಮ್ಮ ಮನೆಗಳಿಗೆ ಆಹ್ವಾನಿಸಬಹುದು. ಆದ್ದರಿಂದ ಅಲ್ಲಿ ನೆಲೆಸಿರುವ ಪರಿಚಿತರ ವಿಳಾಸಗಳನ್ನು ದೂರವಾಣಿ ಸಂಖ್ಯೆ ಸಹಿತವಾಗಿ ಬೆಂಗಳೂರಿನ ಬಸವ ಮಂಟಪಕ್ಕೆ ಆದಷ್ಟು ಬೇಗನೆ ಕಳಿಸಲು ಕೋರುತ್ತೇವೆ.

ಯುಸಿಬಿಪಿಯ ವಿಳಾಸವನ್ನು ಕೊಡಲಾಗಿದೆ. ಇದನ್ನು ಸಹ ನಿಮ್ಮ ಪರಿಚಿತರು, ಬಂಧು ಮಿತ್ರರಿಗೆ ಕಳಿಸಿ ಯುಸಿಬಿಪಿಯನ್ನು ಸಂಪರ್ಕಿಸಲು ಸೂಚಿಸಿ ಪತ್ರ ಬರೆಯಿರಿ. ಪೂಜ್ಯ ಮಾತಾಜಿಯವರು ಮೇ ತಿಂಗಳಿನಲ್ಲಿ ಕಲ್ಯಾಣ ಪರ್ವ ಕಾರ್ಯಕ್ರಮವಾದ ನಂತರ ಪ್ರಯಾಣ ಕೈಗೊಳ್ಳಲಿರುವ ಕಾರಣ ಯುಸಿಬಿಪಿಯು ಸಮಗ್ರವಾದ ಸಂಚಾರ ಮತ್ತು ಪ್ರಚಾರ ಕಾರ್ಯಕ್ರಮ ಹಾಕಿಕೊಳ್ಳಲಿದೆ. ಆದ್ದರಿಂದ ಕಾರ್ಯಕ್ರಮವನ್ನು ಏರ್ಪಡಿಸುವವರು, ತಮ್ಮ ಮನೆಗಳಿಗೆ ಆಹ್ವಾನಿಸುವವರು, ಸಮೀಪದ ಸ್ಥಳದಲ್ಲಿ ಕಾರ್ಯಕ್ರಮ ನಡೆದಾಗ ಉಪನ್ಯಾಸ ಕೇಳಲು ಬಯಸುವವರು ಅಲ್ಲಿಯ ವಿಳಾಸಕ್ಕಾಗಲೀ, ಇಲ್ಲಿಗಾಗಲೀ ಸಂಪರ್ಕಿಸಬಹುದು.

ವಿದೇಶ ಪ್ರವಾಸ ಸಹಾಯಾರ್ಥ ಕಾಣಿಕೆಗೆ ಕೋರಿಕೆ

ಪೂಜ್ಯ ಮಾತಾಜಿಯವರು ಮತ್ತು ಸಹಾಯಕರು ಹೋಗಬೇಕಾಗುವುದರಿಂದ ಪ್ರವಾಸದ ವೆಚ್ಚವು ಬಹಳ ಬರುತ್ತದೆ. ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಳು ಬಹಳಷ್ಟು ಯೋಜನೆಗಳನ್ನು ಹಾಕಿಕೊಂಡಿರುವುದರಿಂದ ಹಣದ ಕೊರತೆಯನ್ನು ಎದುರಿಸುತ್ತಿವೆ. ಆದ್ದರಿಂದ ವಿದೇಶ ಪ್ರವಾಸದ ವೆಚ್ಚ ಭರಿಸಲು ಬಸವ ಭಕ್ತರು ಉದಾರವಾಗಿ ಸಹಾಯ ಮಾಡಲು ಕೋರುತ್ತೇವೆ.

ಶರಣ ಮೇಳಕ್ಕೆ ಬರುವಾಗ ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸಕ್ಕಾಗಿ ಎಂದು ನಿಮ್ಮ ಕಾಣಿಕೆಗಳನ್ನು ತಂದು ಸಲ್ಲಿಸಬಹುದು. ಈಗಿನಿಂದಲೇ ಕೊಡಬೇಕು ಎನ್ನುವವರು Basava Mahamane Charitable Trust, Bangalore ಎಂದು ಬ್ಯಾಂಕ್ ಡ್ರಾಫ್ಟ್‌ಗಳನ್ನು ತೆಗೆಸಿ ಬೆಂಗಳೂರು ವಿಳಾಸಕ್ಕೆ ಕಳಿಸಬಹುದು.

ಯುಸಿಬಿಪಿಯು ಅಮೆರಿಕಾದಲ್ಲಿ ಪೂಜ್ಯ ಮಾತಾಜಿಯವರು ಮತ್ತು ಸಹಾಯಕರು ಸಂಚರಿಸುವ, ವಸತಿ, ಊಟದ ವ್ಯವಸ್ಥೆಗಳನ್ನು ನೋಡಿಕೊಳ್ಳಲಿದೆ. ಹೋಗಿ ಬರುವ ವಿಮಾನ ವೆಚ್ಚವನ್ನು ನಮ್ಮ ಸಂಸ್ಥೆಗಳೇ ಭರಿಸಬೇಕಾಗಿವೆ. ಆದ್ದರಿಂದ ಸಹೃದಯರು ಉದಾರವಾಗಿ ದೇಣಿಗೆ ಸಲ್ಲಿಸಿ ಬಸವ ತತ್ತ್ವ ಪ್ರಚಾರ ಕಾರ್ಯದಲ್ಲಿ ನೆರವಾಗಬೇಕೆಂದು ಕೋರುತ್ತೇವೆ.

ಸಂಪರ್ಕಿಸುವ ವಿಳಾಸಗಳು :

1. ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು
   ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್
   ಬಸವ ಮಂಟಪದ 2035, 20ನೇ ಮೇನ್
   2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
   ದೂರವಾಣಿ ಸಂಖ್ಯೆ: 080-3325335/3322790
2. **Universal Centre of Basava Philosphy**
   P.O.Box-92243, Austin, Texas-78709-2243
   U.S.A., 001-512-301-2867
   E-Mail : basavacenter @ yahoo.com
3. **Universal Centre of Basava Philosophy**
   3456, Valley Vista Drive
   San Jose, CA 95148.., 001-408-2708120

ಬಡ ವಿದ್ಯಾರ್ಥಿನಿಗೆ ಧನ ಸಹಾಯಕ್ಕೆ ಕೋರಿಕೆ

ಓರ್ವ ವಿದ್ಯಾರ್ಥಿನಿಯು ಬಿ.ಎಸ್‌ಸಿಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಎಂ.ಎಸ್‌ಸಿಯಲ್ಲಿ ಅರ್ಹತೆಯ ಆಧಾರದ ಮೇಲೆ ಪ್ರವೇಶ ಪಡೆದಿದ್ದಾರೆ. ತಿಂಗಳಿಗೆ ಊಟವಸತಿ ಇತ್ಯಾದಿ ಸೇರಿ 1500 ರೂ. ವೆಚ್ಚವಿದೆ. ತಾಯಿತಂದೆ ಆರ್ಥಿಕವಾಗಿ ದುರ್ಬಲರಿದ್ದು ದಾನಿಗಳಿಂದ ನೆರವು ಕೋರಿದ್ದಾರೆ. ಈ ವಿಷಯವನ್ನು ಕೆಲವು ದಾನಿಗಳ ಗಮನಕ್ಕೆ ತಂದಾಗ ಶರಣ. ಎಸ್.ಹೆಚ್. ಪುಟ್ಟಯ್ಯನವರು 1500 ರೂ. ಮತ್ತು ಶರಣ. ಚನ್ನಬಸವದೇವರು 1500 ರೂ. ಶರಣೆ. ಸರೋಜಮ್ಮ ನಾಗರಾಜು, ಮೈಸೂರು 1500 ರೂ. ಹೀಗೆ ಮೂರು ತಿಂಗಳಿನ ವೆಚ್ಚವನ್ನು ಕೊಟ್ಟಿದ್ದಾರೆ.

ಇಡೀ ವರ್ಷದ ಖರ್ಚನ್ನು ಒಬ್ಬರೇ ವಹಿಸಿಕೊಳ್ಳಲೂ ಮುಂದೆ ಬರಬಹುದು. ಅಥವಾ ಒಂದು ಅಥವಾ ಎಷ್ಟು ತಿಂಗಳು ವಹಿಸಿಕೊಳ್ಳಲು ಸಾಧ್ಯವೋ ಅಷ್ಟು ಕೊಡಬಹುದು.

1. ನಮ್ಮ ಸಂಸ್ಥೆಗೆ ಕಳಿಸಿದರೆ 80ಜಿ ಸೌಲಭ್ಯವೂ ಸಿಗುತ್ತದೆ. ಈ ಸಂಸ್ಥೆಯಿಂದ ವಿದ್ಯಾರ್ಥಿನಿಗೆ ತಲುಪಿಸಿ, ಅವರಿಂದ ತಲ್ಪಿದ್ದಕ್ಕೆ ಪತ್ರ ಬರೆಸಲಾಗುವುದು.
2. ನೇರವಾಗಿ ಕಳಿಸುತ್ತೇವೆ ಎನ್ನುವ ದಾನಿಗಳಿಗೆ ವಿಳಾಸವನ್ನು ಕೊಡಲಾಗುವುದು. ಕೊಟ್ಟ ದಾನಿಗಳ ಹೆಸರನ್ನು ಅವರು (ಒಪ್ಪಿಗೆ ನೀಡಿದರೆ ಮಾತ್ರ) ಕಲ್ಯಾಣ ಕಿರಣದಲ್ಲಿ ಮುದ್ರಿಸಲಾಗುವುದು. ಉದಾರ ಹೃದಯದ ದಾನಿಗಳು ಬಡ ವಿದ್ಯಾರ್ಥಿನಿಯ ನೆರವಿಗೆ ಬರುವರಾಗಿ ನಿರೀಕ್ಷಿಸುತ್ತೇವೆ. 80ಜಿ ರಿಯಾಯಿತಿ ಬೇಕೆನ್ನುವವರು Basava Mahamane Charitable Trust, ಹೆಸರಿಗೆ ಡಿ. ಡಿ. ತೆಗೆಸಬೇಕು.

ಬಸವ ಗಂಗೋತ್ರಿ
ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ **ನಗರ**" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ "**ಬಸವ ಗಂಗೋತ್ರಿ**"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸ-ಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ , ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

ಮಾಜಿ ಸಚಿವ ಲಿಂ॥ ನಾಗಪ್ಪನವರಿಗೆ ಶ್ರದ್ಧಾಂಜಲಿ

ಹನೂರು ಕ್ಷೇತ್ರದಿಂದ ಆಯ್ಕೆಯಾಗಿ ಜನಪ್ರಿಯ ಶಾಸಕರಾಗಿ, ಸಚಿವರೂ ಆಗಿ ಅಪಾರ ಜನ ಪ್ರೀತಿಯನ್ನು ಗಳಿಸಿಕೊಂಡು ಬಾಳೆಲ್ಲವೂ ಪರಿಮಳ ಯುಕ್ತ ವಾಗಿ ಶ್ರೀಗಂಧದಂತೆ ಸೌರಭಿಸಿ, ಸವೆದು ಕಡೆಯಲ್ಲಿ ನರಹಂತಕನ ಒತ್ತೆಯಲ್ಲಿ ದಾರುಣವಾದ ಮರಣವನ್ನು ಪಡೆದ ಶರಣ. ಹೆಚ್. ನಾಗಪ್ಪನವರು ನಿಜಕ್ಕೂ ಹುತಾತ್ಮರೇ ಸರಿ, ಜಗತ್ತಿನಲ್ಲಿ ಎರಡು ಪ್ರಕಾರದ ಜನರಿರುತ್ತಾರೆ ಕೆಲವರು ಬದುಕಿ ಸಾಯುತ್ತಾರೆ, ಮತ್ತೆ ಕೆಲವರು ಸತ್ತೂ ಬದುಕುತ್ತಾರೆ. ಒಂದು ಕ್ರೂರ ವ್ಯವಸ್ಥೆಯನ್ನು ಪೋಷಿಸುತ್ತ ಕಲ್ಲಿಗಿಂತಲೂ ಕಠೋರ ಹೃದಯಿಗಳಾಗಿ ಕಪಟತನದ ಮಾತುಗಳನ್ನಾಡುತ್ತ ಗದ್ದುಗೆಯನ್ನು ಹಿಡಿದುಕೊಂಡು ಭದ್ರವಾಗಿ ಕುಳಿತು ಪ್ರತ್ಯಕ್ಷವೋ ಅಪ್ರತ್ಯಕ್ಷವೋ ಆಗಿ ನಾಗಪ್ಪನವರ ಹತ್ಯೆಗೆ ಕಾರಣರು, ಸೂತ್ರಧಾರರು, ಪೋಷಕರೂ ಆಗಿರುವ ಕೆಲವರು ಇಂದು ಬದುಕಿದ್ದರೂ ಸತ್ತಂತವರೆ ! ಆದರೆ ಶರಣ. ನಾಗಪ್ಪನವರು ದುರಂತ ಸಾವನ್ನು ಅಪ್ಪಿದರೂ ಅದೊಂದು ಉದಾತ್ತ ಬಲಿದಾನ ಎಂಬ ಗೌರವವನ್ನು ಜನತೆಯಿಂದ ಪಡೆದುಕೊಂಡು, ಇಂದು ಅಸಂಖ್ಯಾತರ ಅನುಕಂಪ ಮತ್ತು ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ವೀರಪ್ಪನ ಒತ್ತೆಯಾಳಾಗಿ ಇದ್ದಾಗ ಅವರು ಪ್ರದರ್ಶಿಸಿದ ಸಂಯಮ, ನಿರ್ಲಿಪ್ತತೆ ಶರಣ. ನಾಗಪ್ಪನವರು ಉನ್ನತ ಮಾನಸಿಕ ಸ್ಥಿತಿ ಪಡೆದ ಶರಣರೆಂಬುದಕ್ಕೆ ಸಂಕೇತವಾಗಿವೆ. ಡಾ॥ ರಾಜಕುಮಾರ್‌ರವರ ಪ್ರಕರಣದ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ತೌಲನಿಕವಾಗಿ ನೋಡಿದಾಗ ನಾಗಪ್ಪನವರ ವ್ಯಕ್ತಿತ್ವ ಸ್ಫುಟವಾಗುತ್ತದೆ. ಅವರು ಕೆಸೆಟ್ ಮೂಲಕ ಅಳುವುದನ್ನು, ಗೋಗರೆಯುವುದನ್ನು ಮಾಡಿಲ್ಲ. ಒಂದೆರಡು ಸಲ ಕ್ಷೀಣ ಧ್ವನಿಯಲ್ಲಿ, ನನಗೆ ಆರೋಗ್ಯ ಸರಿ ಇಲ್ಲ, ಬೇಗನೆ ಬಿಡಿಸಿಕೊಳ್ಳಿರಿ ಎಂದು ಹೇಳಿದಂತೆ ವರದಿಯಾಗಿದ್ದರೂ , ಮಣಿಯನ್ನು ಪಡೆದು ಇವರನ್ನು ಬಿಡುಗಡೆ ಮಾಡಬೇಕೆಂದು ವೀರಪ್ಪನ್ ಬಂದೂಕನ್ನು ಹಿಡಿದು ಇವರಿಂದ ಹೇಳಿಸಿರುವ ಸಾಧ್ಯತೆ ಇದೆ.

ಅವರು ಬರೆದಿಟ್ಟ ಮಂತ್ರಲೇಖನ ಪುಸ್ತಕದಲ್ಲಿ "ನನ್ನ ಬಿಡುಗಡೆಗೆ ಹಣ ಅಪವ್ಯಯ ಮಾಡಬೇಡಿ. ಮನೆಯ ಅಡಚಣೆಗೆ ಮಾತ್ರ ಅರಿಷಿಣ ಮಾರಿ" ಮುಂತಾದ ಪದಗಳು ಅವರ ಕಾಳಜಿಯನ್ನು ಪ್ರದರ್ಶಿಸುತ್ತವೆ. ತಿಮಿಂಗಲದ ಹೊಟ್ಟೆಯ ಕಾಡಿನ ವೀರ ವೀರಪ್ಪನ್, ನಾಡಿನ ಚೋರರಾದ ರಾಜಕಾರಣಿಗಳ ಜೇಬು ತುಂಬಿಸಲು ನಾಗಪ್ಪನವರು ಮತ್ತು ಅವರ ಕುಟುಂಬದವರಲ್ಲಿ ಅಕ್ರಮ ಸಂಪಾದನೆಯ ಹಣ ಇರಲಿಲ್ಲ ಎಂಬುದನ್ನು ನಾಗಪ್ಪ ಬಲ್ಲರು. ಆರ್ಥಿಕ ಸಂಕಷ್ಟ ನಿವಾರಣೆಗೆ ಕೃಷಿ ಉತ್ಪನ್ನ ಮಾರಿರಿ, ಬಂಧುಗಳಿಂದ ಸಾಲ ಪಡೆದು ಮಗಳನ್ನು ಕಳಿಸಿರಿ ಎಂಬ ಮಾತು ಶರಣ. ನಾಗಪ್ಪ ಎಂಥಾ ಪ್ರಾಮಾಣಿಕ ರಾಜಕಾರಣಿ ಎಂಬುದನ್ನು ತೋರಿಸುತ್ತದೆ. ಶ್ರೀ ರಾಜೂಗೌಡರಿಗೆ ಜನ ವೀರಪ್ಪನ್ ಬಂದೂಕಿಗೆ ಹೆದರಿ ಓಟು ಕೊಟ್ಟಿದ್ದರೆ, ಶ್ರೀ ನಾಗಪ್ಪನವರಿಗೆ ಜಾತಿಮತ ಪಂಥ ಭೇದವಿಲ್ಲದೆ ಅಭಿಮಾನದಿಂದ ಓಟು ಕೊಟ್ಟಿದ್ದಾರೆಂಬುದು ಕೊಳ್ಳೇಗಾಲಕ್ಕೆ ಹೋಗಿದ್ದ ನಮ್ಮ ಕಾರ್ಯಕರ್ತರಿಗೆ ಮನವರಿಕೆಯಾಯಿತು. ಒಂದು ರಾತ್ರಿ ಅಲೆಕ್ಸಾಂಡರ್ ಎಂಬುವವರ ಕಾಡಿನ ಮನೆಯಲ್ಲಿದ್ದಾಗ ಆ ಮನೆಯವರು ನೀವು ತಪ್ಪಿಸಿಕೊಳ್ಳಿ ಎಂದು ವಿನಂತಿಸಿದಾಗ, "ಬೇಡ ನನ್ನಿಂದ ನಿಮಗೆ ತೊಂದರೆ ಏಕೆ ? " ಎಂದು ನಿರಾಕರಿಸಿದ್ದು ನಾಗಪ್ಪನವರ ಸಂವೇದನಾ ಶೀಲತೆ, ಮಾನವೀಯತೆಯನ್ನು ತೋರಿಸುತ್ತದೆ. ಅಂಥ ವಿಚಿತ್ರ, ಭಯಾನಕ ಸನ್ನಿವೇಶದಲ್ಲೂ ಅವರು ಧೈರ್ಯಗೆಡದೆ ಓಂ ನಮಃ ಶಿವಾಯ ಮಂತ್ರವನ್ನು ಬರೆಯುತ್ತಿದ್ದುದು ಮತ್ತು ವಚನಗಳ ಅಧ್ಯಯನ, ಲೇಖನ ಮಾಡುತ್ತಿದ್ದುದು ಬಹಳ ಗಮನಾರ್ಹ.

ಓರ್ವ ಮಠಾಧೀಶರ ಬಳಿ ನಾನು ಮಾತನಾಡುತ್ತ, ಅಪಹರಣವಾದುದು ಅನ್ಯಾಯ. ಸರ್ಕಾರವು ಬಿಡುಗಡೆಗೆ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಇದನ್ನು ಪ್ರತಿಭಟಿಸಲು ರ್‍ಯಾಲಿ ಮಾಡುತ್ತಿದ್ದೇವೆ ಎಂದಾಗ ಅವರು ನಾಗಪ್ಪ ಹಾಗೆ ಹೋಗಬಾರದಿತ್ತು. ನಾನು ಬರುವುದಿಲ್ಲ ಎಂದು ಹಠ ಹಿಡಿದು ಕೂತಿದ್ದರೆ ವೀರಪ್ಪನ್ ಏನು ಮಾಡುತ್ತಿದ್ದ ? ಎಂದು ಬಿಟ್ಟರು. ಇವರಿಗೆ ವ್ಯವಹಾರ ಜ್ಞಾನವಿಲ್ಲ (common sense) ಎನ್ನಿಸಿತು. ಒಂದು ವೇಳೆ ನಾಗಪ್ಪನವರು ಹೊರಗೆ ಹೊರಡದಿದ್ದರೆ ದಯಾಹೀನ, ಕಟುಕ ವೀರಪ್ಪ ತನ್ನ ಆಧುನಿಕ ಬಂದೂಕಿನಿಂದ ಇಡೀ ಕುಟುಂಬವನ್ನೇ ನಿರ್ನಾಮ ಮಾಡಿದ್ದರೆ ಏನು ತಾನೆ ಮಾಡಬಹುದಿತ್ತು ? ಅದನ್ನು ಊಹಿಸಿಯೇ ಪ್ರತಿರೋಧ ತೋರಿಸದೆ ನಾಗಪ್ಪನವರು ವೀರಪ್ಪನನ್ನು ಹಿಂಬಾಲಿಸಿದ್ದಾರೆ. ಹೀಗೆ ತಮ್ಮ ಪ್ರಾಣ ತೆತ್ತು ತಮ್ಮ ಕುಟುಂಬ ಪರಿವಾರವನ್ನು ರಕ್ಷಿಸಿ ಆದರ್ಶವನ್ನು ಮೆರೆದಿದ್ದಾರೆ. ಧರ್ಮಪಿತ ಬಸವಣ್ಣನವರು ಹೇಳುವಂತೆ :

ಲೇಸೆನಿಸಿಕೊಂಡು ಅಯ್ದು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ಮೂರು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ಎರಡು ದಿನ ಬದುಕಿದಡೇನು ?
ಲಿಂಗದೇವನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೆ ?

ಲಿಂಗದೇವನ ಶರಣರ ವಚನದಲ್ಲಿ ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೆ ? ಎಂಬ ಮಾತಿನಂತೆ ಲೇಸಿನ ಬದುಕಿನಿಂದ ಎಲ್ಲರ ಮನದಲ್ಲಿ ಚಿರಗೌರವ ಪಡೆದಿದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ. ಅವರ ಪತ್ನಿ ಶರಣೆ. ಪರಿಮಳಾ ಅವರು ಪತಿಯ ದುರಂತ ಸಾವಿನಿಂದ ಎದೆಗೆಡದೆ ಫೀನಿಕ್ಸ್ ಪಕ್ಷಿಯಂತೆ ಮೇಲೆದ್ದು ನಿಲ್ಲಲಿ.


ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನ ಬೇಡ,
ಮುಂದಣ ಫಲದೊಳಗರಸಿಕೊ !
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನಬೇಡ,
ಮುಂದಣ ಬಣ್ಣದೊಳಗರಸಿಕೊ !
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನಬೇಡ,
ಮುಂದಣ ಅಗ್ನಿಯೊಳಗರಸಿಕೋ !
ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ,
ಇದು ಕಾರಣ ಕೂಡಲಚೆನ್ನಸಂಗನ ಶರಣರ
ಪಾದ ಪ್ರತಿಬಿಂಬದೊಳಗರಸಿಕೊ
ಸಂಗನಬಸವಣ್ಣನ ಬಸವಣ್ಣನ.

ಎಂಬ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಕೆಚ್ಚಿನ ದಿವ್ಯ ಸಂದೇಶದಂತೆ ಆತ್ಮಬಲ ಮೈಗೂಡಿಸಿಕೊಂಡು ನಾಗಪ್ಪನವರ ಕುಟುಂಬ ಪರಿವಾರದವರು ಮುಂದೆ ಸಾಗಿ, ಯಶಸ್ಸು ಪಡೆದು ನಾಗಪ್ಪನವರ ಋಣ ತೀರಿಸುವಂತಾಗಲೆಂದು ಹರಸುತ್ತೇವೆ.


ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

2003ನೇ ಸಾಲಿನ ಲಿಂಗವಂತ (ಬಸವ) ಧರ್ಮಿಯರ ಹಬ್ಬ-ಹುಣ್ಣಿಮೆ-ಉತ್ಸವಗಳು

1. ಶರಣ ಮೇಳ	ಜನವರಿ 11 ರಿಂದ 15
2. ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಶರಣ ಸಮಾಗಮ★	ಜನವರಿ 14
3. ಸಿದ್ಧರಾಮೇಶ್ವರ ಜಯಂತಿ ★	ಜನವರಿ 15
4. ಗಣರಾಜ್ಯೋತ್ಸವ ★	ಜನವರಿ 26
5. ಚನ್ನ ಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ)	ಫೆಬ್ರುವರಿ 16
ಪವಿತ್ರ ಗಣ ಭೋಜನ	ಫೆಬ್ರುವರಿ 16
6. ಕೂಡಲ ಸಂಗಮದಲ್ಲಿ ಶರಣ ಜ್ಯೋತಿ ದರ್ಶನ-ಮಾಘ ಹುಣ್ಣಿಮೆ	
7. ಸರ್ವ ಶರಣರ ದಿನಾಚರಣೆ -ಮಹಾ ಶಿವರಾತ್ರಿ	ಮಾರ್ಚ 1
8. ಪೂಜ್ಯ ಮಾತಾಜಿಯವರ ವರ್ಧಂತಿ	ಮಾರ್ಚ 13
9. ಕಲ್ಯಾಣ ಕ್ರಾಂತಿ ಸಂಸ್ಮರಣಾ ಕಾರ್ಯಕ್ರಮ	
ಫಾಲ್ಗುಣ ಮಾಸದ ದ್ವಾದಶಿ -ಧರ್ಮಪಿತರ ಗಡಿಪಾರು	ಮಾರ್ಚ್ 15
ತ್ರಯೋದಶಿ - ಹರಳಯ್ಯ ಮಧುವರಸರ ಬಂಧನ	ಮಾರ್ಚ್ 16
ಚತುರ್ದಶಿ - ಶರಣರ ವಧೆ	ಮಾರ್ಚ್ 17
ಹೋಳಿ ಹುಣ್ಣಿಮೆ - ಬಿಜ್ಜಳನ ವಧೆ	ಮಾರ್ಚ್ 18
ಪಾಡ್ಯ- ಚನ್ನಬಸವಣ್ಣನವರ ಕಲ್ಯಾಣ ನಿರ್ಗಮನ	ಮಾರ್ಚ್ 19
10. ಶೂನ್ಯ ಪೀಠ ಸ್ಥಾಪನೆ, ಅಲ್ಲಮ ಪ್ರಭು ಜಯಂತಿ ★	ಎಪ್ರಿಲ್ 2
11. ಅಕ್ಕಮಹಾದೇವಿ ಜಯಂತಿ -ಚೈತ್ರ ಹುಣ್ಣಿಮೆ (ದವನದ)	ಎಪ್ರಿಲ್ 16
12. ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ	ಮೇ 1,2 ಮತ್ತು 3
13. ಮಡಿವಾಳ ಮಾಚಿದೇವ ಜಯಂತಿ ★ -ಕಾಯಕ ದಿನ.	ಮೇ 1
14. ಬಸವ ಜಯಂತಿ ★	ಮೇ 4
15. ಪೂಜ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ದಿನ ಕೂಡಲ ಸಂಗಮದಲ್ಲಿ ಸಂಸ್ಮರಣೆ, ಗಣ ದಾಸೋಹ	ಜೂನ್ 30
16. ಬಸವ ಪಂಚಮಿ (ಲಿಂಗೈಕ್ಯ ದಿನಾಚರಣೆಶ್ರಾವಣ ಶುದ್ಧ ಪಂಚಮಿ)	ಅಗಸ್ಟ 2
17. ನೀಲಮ್ಮ ಷಷ್ಠಿ	ಅಗಸ್ಟ 3
18. ಸ್ವಾತಂತ್ರ್ಯೋತ್ಸವ ★	ಅಗಸ್ಟ 15
19. ಪೂಜ್ಯ ಲಿಂಗಾನಂದ ಸ್ವಾಮಿಗಳ ಜಯಂತಿ ★	ಅಗಸ್ಟ 31
20. ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ	ಅಗಸ್ಟ 31
21. ಬಸವ ಧರ್ಮ ವಿಜಯೋತ್ಸವ, ವಿಜಯದಶಮಿ,★ (ಅಕ್ಕ ನಾಗಲಾಂಬಿಕಾ ಸಂಸ್ಮರಣಾ ದಿನ) ಸಾಮೂಹಿಕ ಇಷ್ಟಲಿಂಗಾರ್ಚನೆ	ಅಕ್ಟೋಬರ 15
23. ಚನ್ನಬಸವ ಜಯಂತಿ ವಚನ ದೀಪೋತ್ಸವ	ಅಕ್ಟೋಬರ 26
22. ಕನ್ನಡ ರಾಜ್ಯೋತ್ಸವ ★	ನವಂಬರ 1
24. ಚನ್ನಬಸವ ಲಿಂಗೈಕ್ಯ ದಿನ ಕಾರ್ತಿಕ ಹುಣ್ಣಿಮೆ	ನವೆಂಬರ್ 8



ಟಿ. ದಾಸರಹಳ್ಳಿ ಪ್ರವಚನ ಸಂದರ್ಭದಲ್ಲಿ ಗಣಾಚಾರ ದಳದವರೊಂದಿಗೆ ಪೂಜ್ಯ ಮಾತಾಜಿ



ಪುಷ್ಪದಿಂದ ಅಲಂಕೃತ ಬಸವ ರಥದಲ್ಲಿ ಬಸವ ಗುರುವಿನ ಭಾವಚಿತ್ರದೊಂದಿಗೆ ಪೂಜ್ಯ ಮಾತಾಜಿಯವರ ಭವ್ಯ ಮೆರವಣಿಗೆ



ಕಲ್ಯಾಣ ಕಿರಣ CPMG/KA/BGW - 50 ಜನವರಿ 2003
R.NO. 19988/70 WPP (W) - 17